KARNATAKA STATE AKKAMAHADEVI WOMEN UNIVERSITY, VIJAYAPURA
(Formerly: Karnataka State Women's University, Vijayapura)

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.

ಕನ್ನಡ ಅಧ್ಯಯನ ವಿಭಾಗ

ಪಿ.ಎಚ್.ಡಿ ಅಧ್ಯಯನಕ್ಕಾಗಿ ಸಲ್ಲಿಸುತ್ತಿರುವ ಪ್ರಬಂಧ ಪೂರ್ವಭಾವಿ ಸಾರಲೇಖ

ಸಂಶೋಧನೆಯ ಶೀರ್ಷಿಕೆ

ಚಂದ್ರಶೇಖರ ಕಂಬಾರ ಮತ್ತು ಗಿರೀಶ ಕಾರ್ನಾಡ ಅವರ ನಾಟಕಗಳಲ್ಲಿ ಮಹಿಳಾ ಸಂಕಥನ

ಸಂಶೋಧನಾ ವಿದ್ಯಾರ್ಥಿನಿ

ಶ್ರೀಮತಿ ಪ್ರಿಯದರ್ಶಿನಿ ಬಸವರಾಜ ಬಿರಾದಾರ

ಮಾರ್ಗದರ್ಶಕರು

ಪ್ರೊ. ಮಹೇಶ ಚಿಂತಾಮಣಿ

ಪ್ರಾಧ್ಯಾಪಕರು

ಕನ್ನಡ ಅಧ್ಯಯನ ವಿಭಾಗ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ.

ಪರಿವಿಡಿ

ಚಂದ್ರಶೇಖರ ಕಂಬಾರ ಮತ್ತು ಗಿರೀಶ ಕಾರ್ನಾಡರ ನಾಟಕಗಳಲ್ಲಿ ಮಹಿಳಾ ಸಂಕಥನ

ಪ್ರಸ್ತಾವನೆ

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಯನ ಪೂರ್ವ ಸಮೀಕ್ಷೆ

ಅಧ್ಯಾಯ -೧ ಆಧುನಿಕ ನಾಟಕ ಸಾಹಿತ್ಯ ಪರಂಪರೆ

೧.೧ ಕನ್ನಡ ನಾಟಕ ಸಾಹಿತ್ಯದ ಉಗಮ ಮತ್ತು ಬೆಳವಣಿಗೆ

೧.೨ ಕನ್ನಡ ನಾಟಕಗಳಲ್ಲಿ ಸ್ತ್ರೀ ಪಾತ್ರ ಪರಿಕಲ್ಪನೆ

೧.೩ ಸಂಸ್ಕೃತ ನಾಟಕಗಳಲ್ಲಿ ಸ್ತ್ರೀ ಪಾತ್ರ ಪರಿಕಲ್ಪನೆ

೧.೪ ಪಾಶ್ಚಿಮಾತ್ಯ ನಾಟಕಗಳಲ್ಲಿ ಸ್ತ್ರೀ ಪಾತ್ರ ಪರಿಕಲ್ಪನೆ

೧.೫ ಜಾಗತಿಕ ನಾಟಕ ಸಾಹಿತ್ಯದಲ್ಲಿ ಮಹಿಳಾ ಪಾತ್ರ ಪರಿಕಲ್ಪನೆ

ಅಧ್ಯಾಯ-೨ ನಾಟಕಕಾರರ ಜೀವನ ಮತ್ತು ಸಾಹಿತ್ಯ ಅವಲೋಕನ

೨.೧ ಚಂದ್ರಶೇಖರ ಕಂಬಾರರ ಸಂಕ್ಷಿಪ್ತ ಜೀವನ ಪರಿಚಯ

೨.೨ ಚಂದ್ರಶೇಖರ ಕಂಬಾರರ ಸಮಗ್ರ ಸಾಹಿತ್ಯ ಅವಲೋಕನ ಮತ್ತು ಅವರ ಸಮಗ್ರ ಸಾಹಿತ್ಯದಲ್ಲಿ ಮಹಿಳಾ ನೆಲೆಗಟ್ಟುಗಳ ಪಕ್ಷಿನೋಟ

೨.೩ ಗಿರೀಶ ಕಾರ್ನಾಡರ ಸಂಕ್ಷಿಪ್ತ ಜೀವನ ಪರಿಚಯ

೨.೪ ಗಿರೀಶ ಕಾರ್ನಾಡರ ಸಮಗ್ರ ಸಾಹಿತ್ಯ ಅವಲೋಕನ ಮತ್ತು ಅವರ ಸಮಗ್ರ ಸಾಹಿತ್ಯದಲ್ಲಿ ಮಹಿಳಾ ನೆಲೆಗಟ್ಟುಗಳ ಪಕ್ಷಿನೋಟ

ಅಧ್ಯಾಯ-೩ ಚಾರಿತ್ರಿಕ ನಾಟಕಗಳಲ್ಲಿ ಅಭಿವ್ಯಕ್ತಗೊಂಡಿರುವ ಮಹಿಳಾ ಸಂಕಥನ

೩.೧ ಚಂದ್ರಶೇಖರ ಕಂಬಾರರ ಚಾರಿತ್ರಿಕ ನಾಟಕಗಳಲ್ಲಿ ಚಿತ್ರಣಗೊಂಡಿರುವ ಮಹಿಳಾ ಜೀವನ ಮತ್ತು ಸಂವೇದನೆಗಳು

೩.೧.೧ ಜಕ್ಕಣ್ಣ;-ಹೊಯ್ಸಳ ದೊರೆ ವಿಷ್ಣುವರ್ಧನನ ಆಳ್ವಿಕೆಯಲ್ಲಿ ಶಾಂತಲೆಯ ಪಾತ್ರ

೩.೧.೨ ಶಿವರಾತ್ರಿ;-ಕಲ್ಯಾಣ ಕ್ರಾಂತಿಯಲ್ಲಿ ವೇಶ್ಯೆಯರ ಭಾಗವಹಿಸುವಿಕೆ

೩.೧.೩ ಮಾರಿಕಾಡು;-ನಾಟಕದ ದುರಂತವನ್ನು ಬಿಂಬಿಸುವ ಮಾರಿಯರ ಪಾತ್ರ ಪರಿಕಲ್ಪನೆ

೩.೧.೪ ಇತರ ನಾಟಕಗಳು;-ಮಹಿಳಾ ಪರಿಕಲ್ಪನೆಯ ವಿವಿಧ ನೆಲೆಗಳು

೩.೨ ಗಿರೀಶ ಕಾರ್ನಾಡರ ಚಾರಿತ್ರಿಕ ನಾಟಕಗಳಲ್ಲಿ ಚಿತ್ರಣಗೊಂಡಿರುವ ಮಹಿಳಾ ಜೀವನ ಮತ್ತು ಸಂವೇದನೆಗಳು

೩.೨.೧ ತಲೆದಂಡ:-ವಚನ ಕ್ರಾಂತಿಯಲ್ಲಿ ಮಹಿಳೆಯರ ಸ್ಥಾನಮಾನ

೩.೨.೨ ಟಿಪೂ ಸುಲ್ತಾನ್ ಕಂಡ ಕನಸು:-ಬ್ರಿಟಿಷ್ ಭಾರತದ ರಾಜಕೀಯ ತಲ್ಲಣಗಳಿಗೆ ಬಲಿಯಾಗುವ ರುಕ್ಕಯ್ಯ ಬೇಗಮ್

೩.೨.೩ ರಾಕ್ಷಸ ತಂಗಡಗಿ ;-ವಿಜಯನಗರ ಮತ್ತು ಬಹಮನಿ ರಾಜ ಪರಿವಾರದ ಮಹಿಳೆಯರ ನೋವು ಮತ್ತು ಅಸಹಾಯಕತೆ

೩.೨.೪ ತುಘಲಕ:-ಮಹಿಳೆಯರ ಆರೋಗ್ಯದ ಮೇಲೆ ಯುದ್ಧಗಳು ಬೀರುವ ಪರಿಣಾಮಗಳು

ಅಧ್ಯಾಯ-೪ ಪೌರಾಣಿಕ ನಾಟಕಗಳಲ್ಲಿ ಅಭಿವ್ಯಕ್ತಗೊಂಡಿರುವ ಮಹಿಳಾ ಸಂಕಥನ

೪.೧ ಗಿರೀಶ ಕಾರ್ನಾಡರ ಪೌರಾಣಿಕ ನಾಟಕಗಳಲ್ಲಿ ಚಿತ್ರಣಗೊಂಡಿರುವ ಮಹಿಳಾ ಜೀವನ ಮತ್ತು ಸಂವೇದನೆಗಳು

೪.೧.೧ ಬಲಿ:- ಹಿಂಸೆ ಮತ್ತು ಅಹಿಂಸಾ ಪರಿಕಲ್ಪನೆಗಳ ಘರ್ಷಣೆಯಲ್ಲಿ ನಲುಗುವ ಅಮೃತಮತಿಯ ಅಂತರಂಗ

೪.೧.೨ ಯಯಾತಿ:-ಪುರುಷ ಪ್ರಧಾನ ವ್ಯವಸ್ಥೆಗೆ ಸವಾಲಾಗಿ ನಿಲ್ಲುವ ಚಿತ್ರಲೇಖೆ ಹಾಗೂ ದೇವಯಾನಿ ಮತ್ತು ಶರ್ಮಿಷ್ಠೆಯರ ಕಲಹದಲ್ಲಿ ಗೋಚರಿಸುವ ಮಹಿಳಾ ಸಂವೇದನೆಗಳು

೪.೧.೩ ಅಗ್ನಿ ಮತ್ತು ಮಳೆ:-ನಿಷಾದ ಕನ್ಯೆ ನಿತ್ತಲೆಯ ಪ್ರತಿರೋಧದ ನೆಲೆಗಳು

ಅಅಧ್ಯಾಯ- 5 ಜನಪದ ನಾಟಕಗಳಲ್ಲಿ ಅಭಿವ್ಯಕ್ತಗೊಂಡಿರುವ ಮಹಿಳಾ ಸಂಕಥನ

೫.೧ ಚಂದ್ರಶೇಖರ ಕಂಬಾರರ ಜನಪದ ನಾಟಕಗಳಲ್ಲಿ ಚಿತ್ರಣಗೊಂಡಿರುವ ಮಹಿಳಾ ಜೀವನ ಮತ್ತು ಸಂವೇದನೆಗಳು

೫.೧.೧ ಋಷ್ಯಶೃಂಗ:-ಜಮೀನ್ದಾರಿ ಪದ್ಧತಿಯ ದುಷ್ಪರಿಣಾಮಕ್ಕೆ ಒಳಗಾಗುವ ಕಮಲ ಮತ್ತು ಪಾರಿಯರ ಅಸ್ತಿತ್ವ ಶೋಧ

೫.೧.೨ ಜೋಕುಮಾರಸ್ವಾಮಿ:-ಗೌಡತಿಯ ವೈವಾಹಿಕ ಜೀವನ ಮತ್ತು ಆಕೆಯ ಸಂತಾನ ಹುಟ್ಟು ಹಾಕುವ ಪ್ರಶ್ನೆಗಳು

೫.೧.೩ ಸಿರಿಸಂಪಿಗೆ:-ದೇಹ ಮತ್ತು ಆತ್ಮಗಳ ಶೋಧದಲ್ಲಿ ಸಂಪಿಗೆ ತಾಳುವ ನಿಲುವುಗಳ ಪರಿಕಲ್ಪನೆ.

೫.೧.೪ ಇತರ ನಾಟಕಗಳು:-ಮಹಿಳಾಪಕ ಪರಿಕಲ್ಪನೆಯ ವಿವಿಧ ನೆಲೆಗಟ್ಟುಗಳು

೫.೨ ಗಿರೀಶ ಕಾರ್ನಾಡರ ಜನಪದ ನಾಟಕಗಳಲ್ಲಿ ಚಿತ್ರಗೊಂಡಿರುವ ಮಹಿಳಾ ಜೀವನ ಮತ್ತು ಸಂವೇದನೆಗಳು

೫.೨.೧ ಹಯವದನ:-ಅಪೂರ್ಣತೆಯಲ್ಲಿ ಕೊನೆಗೊಳ್ಳುವ ಪದ್ಮಿನಿಯ ಜೀವನ ಹಾಗೂ ಪ್ರೇಮ ಮತ್ತು ಕಾಮ ಪರಿಕಲ್ಪನೆಯ ಪ್ರಾತಿನಿಧಿಕರಣ

೫.೨.೨ ನಾಗಮಂಡಲ:-ಶೀಲ ಮತ್ತು ಪಾತಿವ್ರತ್ಯ ಪರಿಕಲ್ಪನೆಗಳ ಗೊಂದಲದಲ್ಲಿ ರಾಣಿಯ ಮಾನಸಿಕ ತಲ್ಲಣಗಳು

ಅಧ್ಯಾಯ -೬ ಸಾಮಾಜಿಕ ನಾಟಕಗಳಲ್ಲಿ ಅಭಿವ್ಯಕ್ತಗೊಂಡಿರುವ ಮಹಿಳಾ ಸಂಕಥನ

೬.೧ ಚಂದ್ರಶೇಖರ ಕಂಬಾರರ ಸಾಮಾಜಿಕ ನಾಟಕಗಳಲ್ಲಿ ಚಿತ್ರಣಗೊಂಡಿರುವ ಮಹಿಳಾ ಜೀವನ ಮತ್ತು ಸಂವೇದನೆಗಳು

೬.೧.೧ ಬೆಪ್ತಕ್ಕಡಿ ಬೋಳೇಶಂಕರ:-ಶ್ರಮಜೀವಿ ಕೃಷಿಕನೊಂದಿಗೆ ಮದುವೆಯಾಗುವ ರಾಜಕುಮಾರಿಯ ಆದರ್ಶ ಜೀವನ

೬.೧.೨ ಹರಕೆಯ ಕುರಿ:-ಮಧ್ಯಮ ವರ್ಗದ ಗೃಹಿಣಿಯರ ಮಾನಸಿಕ ತುಡಿತಗಳ ಅನಾವರಣ

೬.೧.೩ ಕಾಡು ಕುದುರೆ:-ಲೈಂಗಿಕ ಪ್ರತಿಮೆಗಳಾಗಿ ಕೋಮಾಲಿ, ಚಂಪಿ,ದುರ್ಗಿ ಮುಂತಾದ ಮಹಿಳೆಯರ ಪಾತ್ರ ಪ್ರಾತಿನಿಧಿಕರಣ

೬.೧.೪ ಇತರೆ ನಾಟಕಗಳು:-ಮಹಿಳಾ ಪರಿಕಲ್ಪನೆಯ ವಿವಿಧ ನೆಲೆಗಟ್ಟುಗಳು

೬.೨ ಗಿರೀಶ ಕಾರ್ನಾಡರ ಸಾಮಾಜಿಕ ನಾಟಕಗಳಲ್ಲಿ ಚಿತ್ರಣಗೊಂಡಿರುವ ಮಹಿಳಾ ಜೀವನ ಮತ್ತು ಸಂವೇದನೆಗಳು

೬.೨.೧ ಅಂಜು ಮಲ್ಲಿಗೆ:-ಯಾಮಿನಿಯ ಪಾತ್ರ ಹುಟ್ಟಿ ಹಾಕುವ ಗಂಡು- ಹೆಣ್ಣಿನ ವಾಸ್ತವಿಕ ಸಂಬಂಧದ ಪ್ರಶ್ನೆಗಳು

೬.೨.೨ ಮದುವೆ ಆಲ್ಬಮ್:-

೬.೨.೩ ಬೆಂದ ಕಾಳು ಆನೆ ಟೋಸ್ಟ್:-ನಗರ ಜೀವನದ ಗೊಂದಲದಲ್ಲಿ ಗೃಹಿಣಿಯಾಗಿ ಕಳೆದು ಹೋಗುವ ಅಂಜನಾ

೬.೨.೪ ಇತರೆ ನಾಟಕಗಳು:-ಮಹಿಳಾ ಪರಿಕಲ್ಪನೆಯ ವಿವಿಧ ನೆಲೆಗಟ್ಟುಗಳು

ಅಧ್ಯಾಯ-೭ ಏಕಾಂಕ ಮತ್ತು ಅಸಂಗತ ನಾಟಕಗಳಲ್ಲಿ ಅಭಿವ್ಯಕ್ತಗೊಂಡಿರುವ ಮಹಿಳಾ ಸಂಕಥನ

೭.೧ ಚಂದ್ರಶೇಖರ ಕಂಬಾರರ ಏಕಾಂಕ ಮತ್ತು ಅಸಂಗತ ನಾಟಕಗಳಲ್ಲಿ ಚಿತ್ರಣಗೊಂಡಿರುವ ಮಹಿಳಾ ಜೀವನ ಮತ್ತು ಸಂವೇದನೆಗಳು

೭.೧.೧ ಅಂಗಿಮ್ಯಾಲಂಗಿ:-ನಾಗರೀಕ ಸಮಾಜದಲ್ಲಿ ಶಾಂತ ಮತ್ತು ಕಾಶಮ್ಮರ ಅಸ್ತಿತ್ವದ ಹುಡುಕಾಟ ಮತ್ತು ಕೌಟುಂಬಿಕ ತಲ್ಲಣಗಳು

೭.೧.೨ ಬೆಂಬತ್ತಿದ ಕಣ್ಣು:-ಉಷಾಳ ಅನೈತಿಕ ಸಂಬಂಧಗಳಿಂದುಂಟಾಗುವ ಸಾಮಾಜಿಕ ಪರಿಣಾಮಗಳು

೭.೧.೩ ಭಾರತಾಂಬೆ:-ರಾಮಕ್ಕ ಮತ್ತು ಬಂಗಾರಿ ಪಾತ್ರಗಳಲ್ಲಿ ವ್ಯಕ್ತವಾಗಿರುವ ಗ್ರಾಮೀಣ ಮತ್ತು ದಲಿತ ಮಹಿಳಾ ಸಂವೇದನೆಗಳ ನೆಲೆಗಟ್ಟುಗಳು

೭.೧.೪ ಚಾಳೇಶ:-ಬಡ ಮಾಧ್ಯಮ ವರ್ಗದ ಅಸಹಾಯಕ ಮಹಿಳಾ ಜೀವನಶೈಲಿಯನ್ನು ಪ್ರತಿನಿಧಿಸುವ ನಂಜಮ್ಮ ಮತ್ತು ಸರಸು ರ ಪಾತ್ರ ಪರಿಕಲ್ಪನೆ

೭.೧.೫ ಇತರೆ ನಾಟಕಗಳು:-ಮಹಿಳಾ ಪರಿಕಲ್ಪನೆಯ ವಿವಿಧ ನೆಲೆಗಟ್ಟುಗಳು

೭.೨ ಗಿರೀಶ ಕಾರ್ನಾಡರ ಏಕಾಂಕ ಮತ್ತು ಅಸಂಗತ ನಾಟಕಗಳಲ್ಲಿ ಚಿತ್ರಣಗೊಂಡಿರುವ ಮಹಿಳಾ ಜೀವನ ಮತ್ತು ಸಂವೇದನೆಗಳು

೭.೨.೧ ಮಾನಿಷಾದ:-ಅಗಸನ ಪತ್ನಿಯ ಮಾನಸಿಕ ತೊಳಲಾಟಗಳು ಮತ್ತು ಅಪ್ರಕಟಿತ ಸೀತೆಯ ಅಸ್ತಿತ್ವ ಹುಡುಕಾಟ

೭.೨.೨ ಒಡಕಲು ಬಿಂಬ:-ಮಹಿಳೆಯರ ಅನಾಥ ಪ್ರಜ್ಞೆಯ ಪರಿಕಲ್ಪನೆ ಮತ್ತು ಮಂಜುಳಾಳ ಏಕಾಂಗಿ ಜೀವನದ ಭಾವನಾತ್ಮಕ ತಲ್ಲಣಗಳು

ಅಧ್ಯಾಯ-೮ ಚಂದ್ರಶೇಖರ ಕಂಬಾರ ಮತ್ತು ಗಿರೀಶ ಕಾರ್ನಾಡ ಅವರ ಇತರೆ ನಾಟಕಗಳಲ್ಲಿ ಅಭಿವ್ಯಕ್ತಗೊಂಡಿರುವ ಮಹಿಳಾ ಸಂಕಥನ

ಅಧ್ಯಾಯ-೯ ಸಮಾರೋಪ

- ಅಧ್ಯಯನದ ಫಲಿತಗಳು
- ಮುಂದಿನ ಅಧ್ಯಾಯನದ ಸಾಧ್ಯತೆಗಳು
- ಚಂದ್ರಶೇಖರ ಕಂಬಾರರ ಸಂದರ್ಶನ

ಅಧ್ಯಾಯ- ೧೦ ಗ್ರಂಥಸೂಚಿ

* ಪ್ರಮುಖ ಛಾಯಾಚಿತ್ರಗಳು

* ಆಕರ ಕೃತಿಗಳು

* ಪರಾಮರ್ಶನ ಗ್ರಂಥಗಳು

* ಸಾಮಾಜಿಕ ಜಾಲತಾಣಗಳು

ಅಧ್ಯಯನದ ಉದ್ದೇಶ ಸ್ವರೂಪ ಮತ್ತು ವ್ಯಾಪ್ತಿ

ಉದ್ದೇಶ

ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ನಾಟಕ ಪ್ರಕಾರವು ಮಹತ್ವದ್ದೆನಿಸಿಕೊಂಡಿದೆ. ಕನ್ನಡ ನಾಟಕ ಪರಂಪರೆಯಲ್ಲಿ ಮಹಿಳಾ ಪರಿಕಲ್ಪನೆಗಳು ವ್ಯಕ್ತaಗೊಂಡಿರುವ ಪರಿಯನ್ನು ವಿಶ್ಲೇಷಣೆಗೆ ಒಳಪಡಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ನಾಟಕ ಒಂದು ಪ್ರಮುಖ ಪ್ರಕಾರವಾಗಿದೆಯಾದರೂ ಇತರ ಪ್ರಕಾರಗಳಾದ ಕಾವ್ಯ, ಸಣ್ಣ ಕಥೆ, ಕಾದಂಬರಿ ವಿಮರ್ಶಗಳಿಗೆ ಹೋಲಿಸಿದರೆ ನಾಟಕಗಳ ಮೇಲೆ ನಡೆದಿರುವ ಅಧ್ಯಯನ ಕಡಿಮೆ ಎನ್ನಬಹುದು ಆದ್ದರಿಂದ ನಾಟಕ ಕ್ಷೇತ್ರದ ವಿಶೇಷತತೆಗಳನ್ನು ಪರಾಮರ್ಶಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಕನ್ನಡದ ಪ್ರಮುಖ ನಾಟಕಕಾರರಾದ ಟಿ .ಪಿ. ಕೈಲಾಸಂ ,ಶ್ರೀರಂಗ, ಪರ್ವತವಾಣಿ, ಸಂಸ, ಚಂದ್ರಶೇಖರ ಕಂಬಾರ, ಗಿರೀಶ ಕಾರ್ನಾಡ, ಪಿ. ಲಂಕೇಶ್ವರ ನಾಟಕಗಳ ಮೇಲೆ ಈ ಹಿಂದೆ ನಡೆದಿರುವ ಹೆಚ್ಚಿನ ಸಂಶೋಧನೆಗಳು ಪುರುಷ ಕೇಂದ್ರಿತ ನೆಲೆ ಎಲ್ಲಿಯೇ ನಡೆದಿರುವುದು ಕಂಡುಬರುತ್ತದೆ ಆದ್ದರಿಂದ ಸ್ತ್ರೀ ಸಂವೇದನಾ ನೆಲೆಯಿಂದ ನಾಟಕಗಳನ್ನು ವಿಮರ್ಶೆಗೆ ಒಳಪಡಿಸುವ ಉದ್ದೇಶದಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಗಿರೀಶ ಕಾರ್ನಾಡ ಹಾಗೂ ಚಂದ್ರಶೇಖರ ಕಂಬಾರರು ರಚಿಸಿದ ನಾಟಕಗಳು ಹೆಚ್ಚಿನ ಜನಪ್ರಿಯತೆಯನ್ನು ಗಳಿಸಿಕೊಂಡಿರುವುದರಿಂದ ಅವರಿಬ್ಬರ ನಾಟಕಗಳಿಗೆ ಸಂಬಂಧಿಸಿದಂತೆ ವಿವಿಧ ಬಗೆಯ ಸಂಶೋಧನೆಗಳು ಕನ್ನಡದಲ್ಲಿ ನಡೆದಿವೆಯಾದರೂ ಪ್ರತ್ಯೇಕವಾಗಿ ಅವರ ನಾಟಕಗಳಲ್ಲಿ ಚಿತ್ರಣಗೊಂಡಿರುವ ಮಹಿಳಾ ಜೀವನ ಮತ್ತು ಸಂವೇದನಗಳ ಕುರಿತು ಯಾವುದೇ ಬಗೆಯ ಹೆಚ್ಚಿನ ಅಧ್ಯಯನಗಳು ನಡೆದಿರದ ಕಾರಣ ಈ ಸಂಶೋಧನೆಯನ್ನು ಕೈಗೊಳ್ಳಲಾಗುತ್ತಿದೆ.

ಚಂದ್ರಶೇಖರ ಕಂಬಾರ ಹಾಗೂ ಗಿರೀಶ ಕಾರ್ನಾಡರ ನಾಟಕಗಳನ್ನು ಸ್ತ್ರೀವಾದಿ ಅಧ್ಯಯನದ ಹಿನ್ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಚಂದ್ರಶೇಖರ ಕಂಬಾರ ಹಾಗೂ ಗಿರೀಶ ಕಾರ್ನಾಡರ ನಾಟಕಗಳಲ್ಲಿ ಮೂಡಿಬಂದಿರುವ ಮಹಿಳಾ ಜೀವನದ ನೋವು, ನಲಿವು, ಸುಖ, ದುಃಖ, ತಂದರೆ, ಅಡಚಣೆ, ಶೋಷಣೆ, ಹತಾಶೆ, ಹಿಂಸೆ, ಅತ್ಯಾಚಾರ ಮುಂತಾದ ಸಂಗತಿಗಳನ್ನು ವಿಸ್ತೃತವಾಗಿ ವಿಮರ್ಶೆಗೆ ಒಳಪಡಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಚಂದ್ರಶೇಖರ ಕಂಬಾರ ಹಾಗೂ ಗಿರೀಶ ಕಾರ್ನಾಡರ ನಾಟಕಗಳಲ್ಲಿ ಕಾಣಿಸಿರುವ ಮಹಿಳಾ ಜೀವನ ಹಾಗೂ ಸಂವೇದನೆಗಳಲ್ಲಿನ ಸಾಮ್ಯತೆ ಮತ್ತು ಭಿನ್ನತೆಯನ್ನು ತೌಲನಿಕವಾಗಿ ಅಧ್ಯಯನಕ್ಕೆ ಒಳಪಡಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಸ್ವರೂಪ ಮತ್ತು ವ್ಯಾಪ್ತಿ

. ಆಧುನಿಕ ಕನ್ನಡ ಸಾಹಿತ್ಯದಲ್ಲಿ ನಾಟಕವು ಒಂದು ಪ್ರಮುಖ ಪ್ರಕಾರವಾಗಿದೆ. ಕನ್ನಡ ಸೇರಿ ಇತರ ಆಧುನಿಕ ಭಾರತೀಯ ಭಾಷೆಗಳಲ್ಲಿ ರಚನೆಯಾಗಿರುವ ನಾಟಕಗಳು ಪಾಶ್ಚಿಮಾತ್ಯ ನಾಟಕ ಪರಿಕಲ್ಪನೆಯ ಪ್ರಭಾವಕ್ಕೆ ಒಳಗಾಗಿವೆ ಎನ್ನಬಹುದು. ಗ್ರೀಕರು ಜಗತ್ತಿಗೆ ಮೊಟ್ಟಮೊದಲಬಾರಿ ನಾಟಕ ಪ್ರಕಾರವನ್ನು ಪರಿಚಯಿಸಿದರು. ಗ್ರೀಕ್ ಭಾಷೆಯಲ್ಲಿ ಕ್ರಿಸ್ತಪೂರ್ವ ಮೂರನೇ ಶತಮಾನದಲ್ಲಿ ದುರಂತ ನಾಟಕಗಳು ರಚನೆಯಾಗಲು ಆರಂಭವಾದವು.

ಕನ್ನಡ ನಾಟಕಗಳ ಸಂದರ್ಭದಲ್ಲಿ ಬಿ ಎಂ ಶ್ರೀಕಂಠಯ್ಯನವರಿಂಧ ಅದು ಯಥೇಚ್ಛವಾಗಿ ಬೆಳೆಯಲು ಆರಂಭಿಸಿತು. ಮುಂದೆ ಶ್ರೀರಂಗ, ಶ್ರೀನಿವಾಸ, ಕುವೆಂಪು ಲಂಕೇಶ, ಚಂದ್ರಶೇಖರ ಕಂಬಾರ, ಗಿರೀಶ ಕಾರ್ನಾಡ ಮುಂತಾದ ಸಾಹಿತಿಗಳು ಕನ್ನಡ ನಾಟಕ ಪರಂಪರೆಯನ್ನು ಶ್ರೀಮಂತಗೊಳಿಸಿ ಜಾಗತಿಕ ಮಟ್ಟದಲ್ಲಿ ಜನಪ್ರಿಯಗೊಳಿಸಿದ್ದಾರೆ. ಕನ್ನಡ ನಾಟಕ ಪರಂಪರೆಯನ್ನು ಜನಪ್ರಿಯಗೊಳಿಸಿದವರಲ್ಲಿ ಪುರುಷ ನಾಟಕಕಾರರೇ ಹೆಚ್ಚಾಗಿದ್ದಾರೆಯಾದರೂ ಅವರು ತಮ್ಮ ನಾಟಕಗಳಲ್ಲಿ ಸೃಷ್ಟಿಸಿರುವ ಮಹಿಳಾ ಪಾತ್ರಗಳ ಬಗ್ಗೆ ತಿಳಿದುಕೊಳ್ಳುವುದು ಅವಶ್ಯಕವಾಗಿದೆ. ಜೊತೆಗೆ ಪುರುಷ ನಾಟಕಕಾರರು ಮಹಿಳೆಯರ ಬಗ್ಗೆ ತಳೆದಿರುವ ನಿಲುವುಗಳನ್ನು ತಿಳಿದುಕೊಳ್ಳುವುದು ಮುಖ್ಯವಾಗಿದೆ.

ಈ ಸಂಶೋಧನಾ ಪ್ರಬಂಧವು ಚಂದ್ರಶೇಖರ ಕಂಬಾರ್ ಮತ್ತು ಗಿರೀಶ ಕಾರ್ನಾಡರ ನಾಟಕಗಳಲ್ಲಿ ಮಹಿಳಾ ಪಾತ್ರ ಪರಿಕಲ್ಪನೆಗಳ ವ್ಯಾಪ್ತಿಗೆ ಸೀಮಿತವಾಗಿರುತ್ತದೆ. ಈ ಇಬ್ಬರು ನಾಟಕಕಾರರ ಸಮಗ್ರ ನಾಟಕಗಳಲ್ಲಿ ಮೂಡಿಬಂದಿರುವ ಮಹಿಳಾ ಜೀವನ ಹಾಗೂ ಸಂವೇದನೆಗಳನ್ನು ಸ್ತ್ರೀವಾದಿ ಅಧ್ಯಯನದ ಹಿನ್ನೆಲೆಯಲ್ಲಿ ವಿಮರ್ಶೆಗೆ ಒಳಪಡಿಸಲಾಗುತ್ತದೆ. ಈ ಸಂಶೋಧನೆಯು ಸಂಪೂರ್ಣವಾಗಿ ಸ್ತ್ರೀವಾದಿ ವಿಮರ್ಶೆಯ ಹಿನ್ನೆಲೆಯಲ್ಲಿಯೇ ನಡೆಯುತ್ತದೆ.

ಅಧ್ಯಯನದ ಅನುಕೂಲಕ್ಕಾಗಿ ಹಾಗೂ ನಾಟಕಗಳ ವಸ್ತುವನ್ನು ಆಧರಿಸಿ ಚಂದ್ರಶೇಖರ ಕಂಬಾರ್ ಹಾಗೂ ಗಿರೀಶ ಕಾರ್ನಾಡರ ನಾಟಕಗಳನ್ನು ಪೌರಾಣಿಕ ಚಾರಿತ್ರಿಕ ಜನಪದ ಸಾಮಾಜಿಕ ಅಸಂಗತ ಹಾಗೂ ಇತರ ನಾಟಕಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಅವುಗಳಲ್ಲಿ ಮೂಡಿಬಂದಿರುವ ಮಹಿಳಾ ಪಾತ್ರ ಪೋಷಣೆಯ ವಿವಿಧ ಮಜಲುಗಳನ್ನು ಇಲ್ಲಿ ವಿಮರ್ಶಾತ್ಮಕವಾಗಿ ವಿವರಿಸಲಾಗುತ್ತದೆ. ಕಂಬಾರ ಹಾಗೂ ಕಾರ್ನಾಡರ ನಾಟಕಗಳ

ಕಥಾವಸ್ತುವನ್ನೇ ಮುಖ್ಯ ಆಧಾರವಾಗಿಸಿಕೊಂಡು ಈ ಸಂಶೋಧನಾ ಪ್ರಬಂಧವನ್ನು ಸಿದ್ಧಪಡಿಸಲಾಗುತ್ತದೆ ಉಳಿದಂತೆ ಕಂಬಾರ ಹಾಗೂ ಕಾರ್ನಾಡರ ನಾಟಕಗಳ ಮೇಲೆ ಬಂದಿರುವ ವಿಮರ್ಶ ಬರಹಗಳನ್ನು ಸಹ ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿ ಅಗತ್ಯವಿರುವ ಮಾಹಿತಿಯನ್ನು ಬಳಸಿಕೊಳ್ಳಲಾಗುತ್ತದೆ. ಒಟ್ಟಾರೆಯಾಗಿ ಆಧುನಿಕ ಸ್ತ್ರೀವಾದಿ ವಿಮರ್ಶೆಯ ಹಿನ್ನೆಲೆಯಲ್ಲಿ ಪುರುಷಲೇಖಕರಿಬ್ಬರ ನಾಟಕಗಳನ್ನು ಈ ಅಧ್ಯಯನಕ್ಕೆ ಒಳಪಡಿಸಲಾಗುತ್ತದೆ.

ಅಧ್ಯಯನದ ಮಿತಿಗಳು

. ಕನ್ನಡ ಸಾಹಿತ್ಯಕ್ಕೆ ಚಂದ್ರಶೇಖರ ಕಂಬಾರ ಮತ್ತು ಗಿರೀಶ ಕಾರ್ನಾಡರ ಕೊಡುಗೆ ಅಪಾರವಾಗಿದೆಯಾದರೂ ಈ ಸಂಶೋಧನೆ ಕೇವಲ ಅವರ ನಾಟಕ ಸಾಹಿತ್ಯದ ಅಧ್ಯಯನದ ವ್ಯಾಪ್ತಿಗೆ ಸೀಮಿತಗೊಂಡಿರುತ್ತದೆ. ಈ ಇಬ್ಬರ ನಾಟಕಗಳ ಸಮಗ್ರ ಅಧ್ಯಯನದ ಬದಲಿಗೆ ಇವರ ನಾಟಕಗಳಲ್ಲಿ ಅಭಿವ್ಯಕ್ತಗೊಂಡಿರುವ ಮಹಿಳಾ ಜೀವನ ಹಾಗೂ ಸಂವೇದನೆಗಳು ಮಾತ್ರ ಈ ಸಂಶೋಧನಾ ಪ್ರಬಂಧದ ಅಧ್ಯಯನಕ್ಕೆ ಸೀಮಿತವಾಗಿರುತ್ತವೆ. ಚಂದ್ರಶೇಖರ ಕಂಬಾರ ಹಾಗೂ ಗಿರೀಶ ಕಾರ್ನಾಡರ ನಾಟಕಗಳಲ್ಲಿ ಕಂಡುಬರುವ ಭಿನ್ನ ನೆಲೆಗಳು ಇಲ್ಲಿ ಕಂಡು ಬರುವುದಿಲ್ಲ. ಬದಲಿಗೆ ಮಹಿಳಾ ಪರಿಕಲ್ಪನೆಯ ವಿವಿಧ ನೆಲೆಗಳ ಅಧ್ಯಯನಕ್ಕೆ ಈ ಸಂಶೋಧನೆ ಸೀಮಿತವಾಗಿರುತ್ತದೆ. ಆಧುನಿಕ ಸ್ತ್ರೀವಾದಿ ವಿಮರ್ಶೆಯ ವ್ಯಾಪ್ತಿಗೆ ಈ ಸಂಶೋಧನಾ ಪ್ರಬಂಧ ಒಳಪಟ್ಟಿರುತ್ತದೆ.

ಇದುವರೆಗೆ ನಡೆದ ಅಧ್ಯಯನಗಳು

- ಗಿರೀಶ್ ಕಾರ್ನಾಡರ ನಾಟಕಗಳಲ್ಲಿ ಸ್ತ್ರೀ ಎಂಬ ವಿಷಯದ ಮೇಲೆ ಮಮತಾ ರಾವ್ ಅವರು 2006ನೇ ಇಸ್ವಿಯಲ್ಲ ಮುಂಬೈ ವಿಶ್ವವಿದ್ಯಾಲಯದಿಂದ ಎಂ ಫಿಲ್ ಪದವಿಯನ್ನು ಪಡೆದಿದ್ದಾರೆ.2006ರಲ್ಲಿಯೆ ಈ ಪ್ರಬಂಧ ಪುಸ್ತಕ ರೂಪದಲ್ಲಿ ಅಭಿಜಿತ ಪ್ರಕಾಶನದಿಂದ ಪ್ರಕಟಗೊಂಡಿದೆ.
- ಗಿರೀಶ ಕಾರ್ನಾಡ ಮತ್ತು ಅವರ ಮೂರು ಚಾರಿತ್ರಿಕ ನಾಟಕಗಳು ಎಂಬ ಪುಸ್ತಕವನ್ನು ಸಿ ಎನ್ ರಾಮಚಂದ್ರನ್ ಅವರು ಬರೆದಿದ್ದಾರೆ. ಈ ಪುಸ್ತಕವು 2008ರಲ್ಲಿ ಸ್ವಪ್ನ ಬುಕ್ ಹೌಸ್ ನಿಂದ ಪ್ರಕಟಗೊಂಡಿದೆ.
- ಗಿರೀಶ ಕಾರ್ನಾಡರ ನಾಟಕಗಳು ಎಂಬ ಪುಸ್ತಕವನ್ನು ಕೃಷ್ಣಮೂರ್ತಿ ಚಂದ್ರ ರವರು ಬರೆದಿದ್ದಾರೆ. ಈ ಪುಸ್ತಕವು ಸ್ವಪ್ನ ಬುಕ್ ಹೌಸ್ ನಿಂದ 2000ರಲ್ಲಿ ಪ್ರಕಟಗೊಂಡಿದೆ.

ಪ್ರಸ್ತುತ ಪ್ರಬಂಧಕ್ಕೆ ಸಂಬಂಧಿಸಿದ ಅಧ್ಯಯನಗಳು

- ಚಂದ್ರಶೇಖರ ಕಂಬಾರರ ನಾಟಕಗಳು: ಒಂದು ಅಧ್ಯಯನ- ಕಾಶೀನಾಥ ಕೆ. (ಕುವೆಂಪು ವಿಶ್ವವಿದ್ಯಾಲಯ ಶಿವಮೊಗ್ಗ. 1992.)
- ಕಂಬಾರರ ನಾಟಕಗಳು : ಒಂದು ಅಧ್ಯಯನ. ಸುನಿತಾ ಸಿದ್ದರಾಮು. (ಗುಲ್ಬರ್ಗ ವಿಶ್ವವಿದ್ಯಾಲಯ ಕಲಬುರಗಿ. 1995.)
- ಲಂಕೇಶರ ಸಂಕ್ರಾಂತಿ ಹಾಗೂ ಕರ್ನಾಡರ ತಲೆದಂಡ : ಒಂದು ತೌಲನಿಕ ಅಧ್ಯಯನ. ರೇಖಾ ಎಸ್. (ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು. 1995)
- ಗಿರೀಶ ಕರ್ನಾಡರ ನಾಟಕಗಳಲ್ಲಿ ಸ್ತ್ರೀ : ಒಂದು ಅಧ್ಯಯನ. ಅನಿತಾ ಗುಡಿ. (ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.)
- ಚಂದ್ರಶೇಖರ ಕಂಬಾರ ಅವರ ನಾಟಕಗಳು., (ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ. 2002

ಅಧ್ಯಾಯ – ೧

ಆಧುನಿಕ ನಾಟಕ ಸಾಹಿತ್ಯ ಪರಂಪರೆ

ಆಧುನಿಕ ನಾಟಕ ಸಾಹಿತ್ಯ ಪರಂಪರೆ ಎಂಬುದು ಈ ಸಂಶೋಧನಾ ಪ್ರಬಂಧದ ಮೊದಲನೆಯ ಅಧ್ಯಾಯವಾಗಿದೆ. ಈ ಅಧ್ಯಾಯದಲ್ಲಿ ಕನ್ನಡ ಸಾಹಿತ್ಯದಲ್ಲಿ ನಾಟಕ ಪ್ರಕಾರದ ಉಗಮ, ಹಿನ್ನೆಲೆ ಹಾಗೂ ಬೆಳವಣಿಗೆಯ ಬಗ್ಗೆ ವಿವರಿಸಲಾಗುತ್ತದೆ. ೧೫ ನೇ ಶತಮಾನದಲ್ಲಿ ರಚನೆಯಾದ ಮಿತ್ರಾವಿಂದಗೋವಿಂದದಿಂದ ಈವರೆಗಿನ ನಾಟಕಗಳ ವಸ್ತು ವೈವಿಧ್ಯತೆಯ ಕುರಿತು ಇಲ್ಲಿ ಅವಲೋಕನವನ್ನು ಮಾಡಲಾಗುತ್ತದೆ. ಅದೇ ರೀತಿ ಕನ್ನಡ ಸಾಹಿತ್ಯವನ್ನು ಹೊರತುಪಡಿಸಿ ಸಂಸ್ಕೃತ, ಇಂಗ್ಲಿಷ್ ಹಾಗೂ ಜಾಗತಿಕ ಸಾಹಿತ್ಯ ಲೋಕದಲ್ಲಿ ಬಂದಿರುವ ಪ್ರಮುಖ ನಾಟಕಗಳಲ್ಲಿನ ಮಹಿಳಾ ಪರಿಕಲ್ಪನೆಯ ವೈವಿಧ್ಯ ನೆಲೆಗಳ ಕುರಿತು ಈ ಅಧ್ಯಾಯದಲ್ಲಿ ವಿವರಿಸಲಾಗುವುದು. ಪ್ರಾಚೀನ ನಾಟಕ ಸಾಹಿತ್ಯದಿಂದ ಆಧುನಿಕ ನಾಟಕ ಸಾಹಿತ್ಯದವರೆಗಿನ ಕಾಲಘಟ್ಟಗಳಲ್ಲಿ ಮಹಿಳಾ ಪಾತ್ರ ಪೋಷಣೆಯಲ್ಲಿ ಆಗಿರುವ ಪ್ರಮುಖ ಬದಲಾವಣೆಗಳನ್ನು ನಾಟಕಗಳ ಹಿನ್ನೆಲೆಯಲ್ಲಿ ವಿವರಿಸಲಾಗುವುದು. ಜಾಗತಿಕ ಸಾಹಿತ್ಯದಲ್ಲಿ ಬಂದಿರುವ ಪ್ರಮುಖ ಮಹಿಳಾಪ್ರಧಾನ ನಾಟಕಗಳ ಹೆಸರುಗಳನ್ನು ಇಲ್ಲಿ ಉಲ್ಲೇಖಿಸಲಾಗುವುದು.

ಅಧ್ಯಾಯ – ೨

ನಾಟಕಕಾರರ ಜೀವನ ಮತ್ತು ಸಾಹಿತ್ಯ ಅವಲೋಕನ

ನಾಟಕಕಾರರ ಜೀವನ ಮತ್ತು ಸಾಹಿತ್ಯ ಆಲೋಕನ ಎಂಬುದು ಈ ಸಂಶೋಧನಾ ಪ್ರಬಂಧದ ಎರಡನೆಯ ಅಧ್ಯಾಯವಾಗಿದೆ. ಈ ಅಧ್ಯಾಯದಲ್ಲಿ ಭಾರತದ ಖ್ಯಾತ ಸಾಹಿತಿಗಳಾದ ಚಂದ್ರಶೇಖರ ಕಂಬಾರ ಹಾಗೂ ಗಿರೀಶ ಕಾರ್ನಾಡರ ಜೀವನ ಚರಿತ್ರೆಯನ್ನು ಪರಿಚಯಿಸಲಾಗುವುದು. ಈ ಭಾಗದಲ್ಲಿ ನಾಟಕಕಾರರ ಬಾಲ್ಯ ಜೀವನ, ವಿದ್ಯಾಭ್ಯಾಸ ಮತ್ತು ವೃತ್ತಿ ಜೀವನದ ಕುರಿತ ಪ್ರಮುಖ ಮಾಹಿತಿಗಳನ್ನು ನೀಡಲಾಗುತ್ತದೆ. ಅದೇ ರೀತಿ ಚಂದ್ರಶೇಖರ ಕಂಬಾರ ಹಾಗೂ ಗಿರೀಶ ಕಾರ್ನಾಡ ಅವರ ಸಾಹಿತ್ಯ ಸೃಷ್ಟಿಯ ವಿಭಿನ್ನ ನೆಲೆಗಳನ್ನು ವಿಮರ್ಶಿಸಲಾಗುವುದು. ಜೊತೆಗೆ ಅವರ ಕೃತಿಗಳ ಪಟ್ಟಿಯನ್ನು ವಿಂಗಡಿಸಿ ನೀಡಲಾಗುತ್ತದೆ. ನಂತರದಲ್ಲಿ ಇಬ್ಬರು ನಾಟಕಕಾರರ ಸಾಹಿತ್ಯದಲ್ಲಿ ಅಭಿವ್ಯಕ್ತ ಗೊಂಡಿರುವ ಮಹಿಳಾ ಸಂವೇದನೆಗಳ ಕುರಿತು ಪರಾಮರ್ಶಿಸಲಾಗುವುದು. ಕಂಬಾರರ ಹಾಗೂ ಕಾರ್ನಾಡರ ಸಾಹಿತ್ಯದಲ್ಲಿ ಕಂಡುಬರುವ ಮಹಿಳಾ ಪರಿಕಲ್ಪನೆಗಳ ನಡುವಿನ ಸಾಮ್ಯತೆ ಮತ್ತು ಭಿನ್ನತೆಗಳನ್ನು ಗುರುತಿಸಲಾಗುವುದು. ಒಟ್ಟಾರೆಯಾಗಿ ಈ ಅಧ್ಯಾಯದಲ್ಲಿ ನಾಟಕಕಾರರ ಜೀವನ ಚಿತ್ರಣ ಹಾಗೂ ಸಾಹಿತ್ಯದ ವಿವಿಧ ಮಾಹಿತಿಗಳನ್ನು ಅವಲೋಕಿಸಲಾಗುತ್ತದೆ.

ಚಂದ್ರಶೇಖರ ಕಂಬಾರರ ನಾಟಕಗಳಲ್ಲಿ ಹೆಚ್ಚಾಗಿ ಮೂಡಿಬಂದಿರುವ ಹೆಣ್ಣಿನ ಲೈಂಗಿಕತೆ ನಿಲುವುಗಳು, ಕಾಮದ ಪ್ರಾತಿನಿಧೀಕರಣ ಮತ್ತು ಸ್ತ್ರೀಶೋಷಣೆಗಳ ಕುರಿತಂತಹ ವಿಷಯಗಳ ಅವಲೋಕನವನ್ನು ಇಲ್ಲಿ ಮಾಡಲಾಗುತ್ತದೆ. ಕಂಬಾರರು ತಮ್ಮ ಹೆಚ್ಚಿನ ನಾಟಕಗಳಲ್ಲಿ ಮಹಿಳೆಯ ಪಾತ್ರ ಪೋಷಣೆ ಯಾವ ಬಗೆಯಲ್ಲಿ ಮಾಡಿದ್ದಾರೆ

ಎಂಬ ವಿಷಯದ ಕುರಿತು ಇಲ್ಲಿ ಚರ್ಚಿಸಲಾಗುವುದು. ಅವರ ನಾಟಕಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಅಲ್ಲಿ ಕಂಡುಬರುವ ಸ್ತ್ರೀಪರ ಅಥವಾ ವಿರೋಧಿ ನಿಲುವುಗಳು ಮೂಡಿಬಂದಿರುವ ಪರಿಯನ್ನು ಪರಾಮರ್ಶಿಸಲಾಗುವುದು.

ಅದೇ ರೀತಿ ಗಿರೀಶ ಕಾರ್ನಾಡರ ನಾಟಕಗಳಲ್ಲಿ ಕಾಣಸಿಗುವ ಮಹಿಳಾ ಪ್ರಧಾನ ಪಾತ್ರಗಳು ಯಾವ ನೆಲೆಯಲ್ಲಿ ಚಿತ್ರಣಗೊಂಡಿವೆ ಎಂಬ ವಿಷಯವನ್ನು ವೈಜ್ಞಾನಿಕ ದೃಷ್ಟಿಕೋನದಿಂದ ಅವಲೋಕಿಸಲಾಗುವುದು. ಸಾಮಾನ್ಯವಾಗಿ ಕಾರ್ನಾಡರ ನಾಟಕಗಳಲ್ಲಿ ಸ್ತ್ರೀ ಪಾತ್ರಗಳು ಹೆಚ್ಚು ಪ್ರಭಾವಶಾಲಿಯಾಗಿ ಮೂಡಿ ಬಂದಿರುವುದನ್ನು ಕಾಣಬಹುದು. ಅವರ ನಾಟಕಗಳಲ್ಲಿನ ಮಹಿಳೆಯರಿಗೆ ಹೆಚ್ಚಿನ ಸ್ಥಾನಮಾನ ಹಾಗೂ ಅವಕಾಶಗಳು ಲಭಿಸಿರುವ ಅಂಶ ನಾಟಕಗಳ ಓದಿನಿಂದ ಖಚಿತ ಪಡುತ್ತದೆ. ಮಹಿಳೆಯರನ್ನು ಆಧುನಿಕ ಕಾಲಮಾನಕ್ಕೆ ತಕ್ಕಂತೆ ಪರಿವರ್ತಿಸಿ ಓದುಗರ ಮುಂದೆ ಇಡುವ ಪ್ರಯತ್ನವನ್ನು ಕಾರ್ನಾಡರು ತಮ್ಮ ನಾಟಕಗಳಲ್ಲಿ ಮಾಡಿರುವುದು ಶ್ಲಾಘನೀಯವಾಗಿದೆ. ಕಾರ್ನಾಡರ ಹೆಚ್ಚಿನ ನಾಟಕಗಳಲ್ಲಿ ಮಹಿಳಾ ಪಾತ್ರಗಳ ಮನಸ್ಥಿತಿ ಹಾಗೂ ಪರಿಸ್ಥಿತಿಯ ಅನಾವರಣ ಮಾಡಲಾಗಿರುತ್ತದೆ. ಈ ಮೂಲಕ ಮಹಿಳೆಯರು ಅನುಭವಿಸುವ ನೋವು, ಕಷ್ಟಗಳು ಹಾಗೂ ಸನ್ನಿವೇಶಗಳನ್ನು ಸಹೃದಯರ ಮುಂದೆ ತೆರೆದಿಡುವ ಪ್ರಯತ್ನವನ್ನು ಕಾರ್ನಾಡರು ತಮ್ಮ ನಾಟಕಗಳಲ್ಲಿ ಮಾಡಿರುವುದು ಕಂಡುಬರುತ್ತದೆ. ಇಂತಹ ಅನೇಕ ಸ್ತ್ರೀಪರ ನಿಲುವುಗಳನ್ನು ಕೂಲಂಕಷವಾಗಿ ಕಾರ್ನಾಡರ ನಾಟಕಗಳಲ್ಲಿ ಅಭಿವ್ಯಕ್ತಿಸಲಾಗಿರುವ ಪರಿಯನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗುತ್ತದೆ. ಒಟ್ಟಾರೆಯಾಗಿ ಚಂದ್ರಶೇಖರ ಕಂಬಾರ ಹಾಗೂ ಗಿರೀಶ ಕಾರ್ನಾಡರ ನಾಟಕಗಳಲ್ಲಿ ಕಾಣಿಸಿರುವ ಮಹಿಳಾ ಪಾತ್ರ ಪರಿಕಲ್ಪನೆಯ ಜೊತೆಗೆ ಅವರ ಇತರ ಸಾಹಿತ್ಯದಲ್ಲಿ ಚಿತ್ರಣಗೊಂಡಿರುವ ಮಹಿಳೆಯರ ಪಾತ್ರ ಪೋಷಣೆಯ ಕುರಿತು ಸಂಕ್ಷಿಪ್ತವಾಗಿ ಈ ಅಧ್ಯಯನದಲ್ಲಿ ವಿಮರ್ಶಿಸಲಾಗುವುದು.

ಅಧ್ಯಾಯ- ೩

ಚಾರಿತ್ರಿಕ ನಾಟಕಗಳಲ್ಲಿ ಅಭಿವ್ಯಕ್ತಗೊಂಡಿರುವ ಮಹಿಳಾ ಸಂಕಥನ

ಚಾರಿತ್ರಿಕ ನಾಟಕಗಳಲ್ಲಿ ಅಭಿವ್ಯಕಗೊಂಡಿರುವ ಮಹಿಳಾ ಸಂಕಥನ ಎಂಬುವುದು ಈ ಸಂಶೋಧನಾ ಪ್ರಬಂಧದ ಮೂರನೆಯ ಅಧ್ಯಾಯವಾಗಿದೆ. ಅನುಕೂಲಕ್ಕಾಗಿ ಕಂಬಾರ ಹಾಗೂ ಕಾರ್ನಾಡರ ಸಮಗ್ರ ನಾಟಕಗಳನ್ನು ಚಾರಿತ್ರಿಕ, ಪೌರಾಣಿಕ, ಸಾಮಾಜಿಕ, ಜಾನಪದ, ಏಕಾಂಕ ಮತ್ತು ಅಸಂಗತ ನಾಟಕಗಳಾಗಿ ವಿಭಾಗಿಸಿಕೊಳ್ಳಲಾಗಿದೆ. ಈ ಅಧ್ಯಾಯದಲ್ಲಿ ಕಂಬಾರ ಹಾಗೂ ಕಾರ್ನಾಡರ ಚಾರಿತ್ರಿಕ ನಾಟಕಗಳಲ್ಲಿ ಕಂಡುಬರುವ ಮಹಿಳಾ ಸಂಕಥನದ ಬಗ್ಗೆ ವಿವರಿಸಲಾಗುವುದು. ಕಂಬಾರರ ಜಕ್ಕಣ್ಣ, ಶಿವರಾತ್ರಿ, ಮಾರಿಕಾಡು ಹಾಗೂ ಕಾರ್ನಾಡರ ತಲೆದಂಡ ತುಘಲಕ್, ರಾಕ್ಷಸ ತಂಗಡಗಿ ಮತ್ತು ಟಿಪೂ ಸುಲ್ತಾನ ಕಂಡ ಕನಸು ನಾಟಕಗಳಲ್ಲಿ ಕಂಡುಬರುವ ಮಹಿಳಾ ಜೀವನ ಹಾಗೂ ಸಂವೇದನೆಗಳನ್ನು ಕುರಿತು ಚರ್ಚಿಸಲಾಗುವುದು. ಜಕ್ಕಣ್ಣ ನಾಟಕದಲ್ಲಿ ಚಿತ್ರಣಗೊಂಡಿರುವ ಶಾಂತಲೆಯ ವ್ಯಕ್ತಿತ್ವದ ಕುರಿತು ಪರಾಮರ್ಶಿಸಲಾಗುವುದು. ಶಿವರಾತ್ರಿ ನಾಟಕದಲ್ಲಿ ಮೂಡಿಬಂದಿರುವ ವಚನ ಚಳುವಳಿಯಲ್ಲಿ ಭಾಗವಹಿಸಿದ ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ಕುಲಂಕಷವಾಗಿ ಚರ್ಚಿಸಲಾಗುವುದು.

ಗಿರೀಶ ಕಾರ್ನಾಡರು ರಚಿಸಿರುವಂತಹ ನಾಲ್ಕು ಚಾರಿತ್ರಿಕ ನಾಟಕಗಳು ಭಾರತೀಯ ರಂಗಭೂಮಿ ಹಾಗೂ ಸಾಹಿತ್ಯದಲ್ಲಿ ಮೈಲುಗಲ್ಲಾಗಿ ಉಳಿದುಕೊಂಡಿರುವುದು ಒಂದು ವಿಶೇಷ. ಈ ಅಧ್ಯಾಯದಲ್ಲಿ ತುಘಲಕ್ ನಾಟಕದಲ್ಲಿ

ಕಾಣಸಿಗುವ ಮಲತಾಯಿಯ ಪಾತ್ರದ ಬಗ್ಗೆ ವಿವರಿಸಲಾಗುವುದು. ಯುದ್ಧಗಳು ಪುರುಷರಿಗಷ್ಟೇ ಸೀಮಿತವಾಗಿರದೆ ಮಹಿಳೆಯರ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಯಾವ ತರಹದ ದುಷ್ಪರಿಣಾಮಗಳನ್ನು ಬೀರುತ್ತವೆ ಎಂಬ ಅಂಶಗಳು ನಾಟಕದಲ್ಲಿ ಚಿತ್ರಣಗೊಂಡಿರುವ ಪರಿಯನ್ನು ಇಲ್ಲಿ ಪರಾಮರ್ಶಿಸಲಾಗುವುದು. ಕಾರ್ನಾಡರು ತಮ್ಮ ಚಾರಿತ್ರಿಕ ನಾಟಕಗಳಲ್ಲಿ ಚಿತ್ರಿಸಿರುವ ಮಹಿಳೆಯರಿಗೆ ಆಧುನಿಕತೆಯ ಸ್ಪರ್ಶವನ್ನು ನೀಡಿರುವುದು ಒಂದು ವಿಶೇಷ ಸಂಗತಿ. ಈ ಮೇಲಿನ ಎಲ್ಲ ನಾಟಕಗಳಲ್ಲಿ ಕಾಣಸಿಗುವ ರಾಜ ಪರಿವಾರದ ಮಹಿಳೆಯರು ಅನುಭವಿಸಿದ ಮಾನಸಿಕ ಯಾತನೆ ಮತ್ತು ದೈಹಿಕ ಹಿಂಸೆಗಳ ಪರಿಕಲ್ಪನೆಯ ಕುರಿತು ಈ ಅಧ್ಯಾಯದಲ್ಲಿ ವಿವರಿಸಲಾಗುವುದು. ಒಟ್ಟಾರೆಯಾಗಿ ಈ ಅಧ್ಯಾಯದಲ್ಲಿ ಚಂದ್ರಶೇಖರ ಕಂಬಾರ ಹಾಗೂ ಗಿರೀಶ ಕಾರ್ನಾಡರ ಚಾರಿತ್ರಿಕ ನಾಟಕಗಳಲ್ಲಿ ಕಂಡುಬರುವ ಮಹಿಳಾ ಜೀವನ ಹಾಗೂ ಸಂವೇದನೆಗಳ ವಿವಿಧ ಮಜಲುಗಳನ್ನು ವಿಸ್ತಾರವಾಗಿ ವಿಮರ್ಶಿಸಲಾಗುವುದು.

ಅಧ್ಯಾಯ- ೪

ಪೌರಾಣಿಕ ನಾಟಕಗಳಲ್ಲಿ ಅಭಿವ್ಯಕ್ತಗೊಂಡಿರುವ ಮಹಿಳಾ ಸಂಕಥನ

ಪೌರಾಣಿಕ ನಾಟಕಗಳಲ್ಲಿ ಅಭಿವ್ಯಕ್ತಗೊಂಡಿರುವ ಮಹಿಳಾ ಸಂಕಥನ ಎಂಬುದು ಈ ಸಂಶೋಧನಾ ಪ್ರಬಂಧದ ನಾಲ್ಕನೆಯ ಅಧ್ಯಾಯವಾಗಿದೆ. ಕಂಬಾರರ ಕೆಲ ನಾಟಕಗಳು ಪೌರಾಣಿಕ ಕಥೆಗಳಿಂದ ಪ್ರೇರಣೆ ಪಡೆದಿವೆಯಾದರೂ ನೇರವಾಗಿ ಪೌರಾಣಿಕ ಕಥಾವಸ್ತುವಿನ ಮೇಲೆ ರಚನೆಯಾಗಿರದ ಕಾರಣ ಕಂಬಾರರ ಯಾವುದೇ ನಾಟಕಗಳನ್ನು ಈ ಅಧ್ಯಾಯದ ವ್ಯಾಪ್ತಿಗೆ ಒಳಪಡಿಸಲಾಗುವುದಿಲ್ಲ. ಗಿರೀಶ ಕಾರ್ನಾಡರು ಪುರಾಣಗಳ ಕಥಾವಸ್ತು ಹಾಗೂ ಪಾತ್ರಗಳ ಮೇಲೆ ನೇರವಾಗಿ ನಾಟಕಗಳನ್ನು ರಚಿಸಿರುವುದರಿಂದ ಈ ಅಧ್ಯಾಯದಲ್ಲಿ ಕಾರ್ನಾಡರ ಮೂರು ನಾಟಕಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗುತ್ತದೆ. ಮಹಾಭಾರತದ ಯಯಾತಿ ಮಹಾರಾಜನ ದುರಂತವನ್ನು ಕೇಂದ್ರವಾಗಿರಿಸಿಕೊಂಡು ರಚಿಸಿದ ಯಯಾತಿ ನಾಟಕದ ಮಹಿಳಾ ಪಾತ್ರಗಳ ವಿಮರ್ಶೆಯನ್ನು ಇಲ್ಲಿ ಮಾಡಲಾಗುತ್ತದೆ. ನಾಟಕದ ಪ್ರಮುಖ ಪಾತ್ರ ಚಿತ್ರಲೇಖೆ ಕೊನೆಯಲ್ಲಿ ತೋರುವ ಪ್ರತಿರೋಧದ ಬಗ್ಗೆ ಇಲ್ಲಿ ಅವಲೋಕಿಸಲಾಗುವುದು. ಜೊತೆಗೆ ದೇವಯಾನಿ ಹಾಗೂ ಶರ್ಮಿಷ್ಠೆರ ಆಂತರಿಕ ಕಲಹಗಳನ್ನು ನಾಟಕಕಾರ ಆಧುನಿಕ ಸ್ತ್ರೀ ಸಂವೇದನಾ ನೆಲೆಗಳಲ್ಲಿ ವಿವರಿಸಲಾಗಿರುವ ಪರಿಯನ್ನು ಇಲ್ಲಿ ವಿಶ್ಲೇಷಿಸಲಾಗುತ್ತದೆ. ಅದೇ ರೀತಿ ಅಗ್ನಿ ಮತ್ತು ಮಳೆ ನಾಟಕದಲ್ಲಿ ವ್ಯಕ್ತವಾಗಿರುವ ನಿಶಾಧ ಕನ್ಯೆ ನಿತ್ತಲೆಯ ವ್ಯಕ್ತಿತ್ವದ ಆಯಾಮಗಳನ್ನು ವಿವರಿಸಲಾಗುವುದು. ಆಡಳಿತ ವರ್ಗ ಹಾಗೂ ಬುಡಕಟ್ಟು ವರ್ಗಗಳ ತಿಕ್ಕಾಟಗಳನ್ನು ಹಾಗೂ ಅದರ ಭಿನ್ನ ಪರಿಣಾಮಗಳ ನೆಲೆಗಳನ್ನು ಈ ಅಧ್ಯಯನದಲ್ಲಿ ವಿವರಿಸಲಾಗುವುದು. ಹಾಗೆಯೇ ಬಲಿ ನಾಟಕದಲ್ಲಿ ಕಂಡುಬರುವ ಹಿಂಸೆ ಮತ್ತು ಅಹಿಂಸೆ ತತ್ವಗಳ ಪ್ರತಿನಿಧಿಗಳಾಗಿ ನಿಲ್ಲುವ ಅಮೃತಮತಿ ಮತ್ತು ರಾಜ ಮಾತೆಯರ ವ್ಯಕ್ತಿತ್ವದ ಅನಾವರಣವನ್ನು ಮಾಡಲಾಗುವುದು. ಮಾನಿಷಾದ ನಾಟಕದ ಕಥಾವಸ್ತು ರಾಮಾಯಣವನ್ನು ಆಧರಿಸಿದೆಯಾದರೂ ಅದನ್ನು ಏಕಾಂತ ನಾಟಕಗಳ ವಿಭಾಗದಲ್ಲಿ ಪರಿಗಣಿಸಲಾಗಿದೆ. ಆ ವಿಭಾಗದಲ್ಲಿ ಮಾನಿಷಾದ ನಾಟಕದ ಸ್ತ್ರೀ ಪಾತ್ರಗಳ ವಿಮರ್ಶಾತ್ಮಕ ವಿವರಣೆಯನ್ನು ನೀಡಲಾಗುತ್ತದೆ.

ಅಧ್ಯಾಯ- ೫

ಜನಪದ ನಾಟಕಗಳಲ್ಲಿ ಅಭಿವ್ಯಕ್ತ ಗೊಂಡಿರುವ ಮಹಿಳಾ ಸಂಕಥನ

ಜನಪದ ನಾಟಕಗಳಲ್ಲಿ ಅಭಿವ್ಯಕ್ತಗೊಂಡಿರುವ ಮಹಿಳಾ ಸಂಕಥನ ಎಂಬುದು ಈ ಸಂಶೋಧನಾ ಪ್ರಬಂಧದ ಐದನೆಯ ಅಧ್ಯಾಯವಾಗಿದೆ. ಚಂದ್ರಶೇಖರ ಕಂಬಾರ ಅವರು ಜನಪದ ಸೊಗಡಿನ ಕಥಾ ಹಂದರವುಳ್ಳ ಸಾಹಿತ್ಯವನ್ನು ಹೆಚ್ಚಾಗಿ ರಚಿಸಿರುವುದರಿಂದ ಇಲ್ಲಿ ಅವರ ಏಳು ನಾಟಕಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗುತ್ತದೆ. ಜೋಕುಮಾರಸ್ವಾಮಿ ನಾಟಕದ ಕೇಂದ್ರ ಪಾತ್ರವಾದ ಗೌಡತಿಯ ಸಂತಾನ ಹುಟ್ಟಿಹಾಕುವ ಪ್ರಶ್ನೆಗಳ ಬಗ್ಗೆ ಆಧುನಿಕ ಸ್ತ್ರೀವಾದಿ ನೆಲೆಗಟ್ಟಿನಲ್ಲಿ ವಿಶ್ಲೇಷಿಸಲಾಗುವುದು. ನಂತರ ಸಿರಿಸಂಪಿಗೆ ನಾಟಕದಲ್ಲಿ ಮೂಡಿಬಂದಿರುವ ಕೇಂದ್ರ ಪಾತ್ರವಾದ ಸಂಪಿಗೆಯ ಅಂತರಂಗದ ತಳಮಳಗಳನ್ನು ಸೂಕ್ಷ್ಮವಾಗಿ ವಿಮರ್ಶಿಸುವುದು. ನಾಟಕದ ಕೊನೆಗೆ ಸಂಪಿಗೆ ತಾಳುವ ನಿಲುವುಗಳ ಬಗೆಗೆ ಚರ್ಚಿಸಲಾಗುವುದು. ಅದೇ ರೀತಿ ಋಷ್ಯಶೃಂಗ ನಾಟಕದಲ್ಲಿ ಜಮೀನ್ದಾರರ ದೌರ್ಜನ್ಯಕ್ಕೆ ಒಳಗಾಗುವ ಪಾರಿ ಮತ್ತು ಕಮಲಿ ಪಾತ್ರಗಳ ಅಸ್ತಿತ್ವದ ನೆಲೆಗಳ ಬಗ್ಗೆ ವಿಶ್ಲೇಷಿಸಲಾಗುವುದು. ಕಂಬಾರರ ಇತರ ಜನಪದ ನಾಟಕಗಳಲ್ಲಿ ಅಭಿವ್ಯಕ್ತಗೊಂಡಿರುವ ವಿಭಿನ್ನ ಮಹಿಳಾ ಪರಿಕಲ್ಪನೆಗಳ ಕುರಿತು ಈ ಅಧ್ಯಾಯದಲ್ಲಿ ವಿಮರ್ಶಿಸಲಾಗುವುದು. ಒಟ್ಟಾರೆಯಾಗಿ ಕಂಬಾರರ ಎಲ್ಲ ಜನಪದ ನಾಟಕಗಳಲ್ಲಿ ಮೂಡಿಬಂದಿರುವ ಸ್ತ್ರೀ ಪಾತ್ರಗಳು ವೈವಿಧ್ಯತೆಯಿಂದ ಕೂಡಿರುವುದು ವಿಶೇಷವಾಗಿದೆ. ಮಹಿಳೆಯರ ಪಾತ್ರದ ಮೂಲಕ ಉತ್ತರ ಕರ್ನಾಟಕದ ಜನಪದ ಜೀವನದ ಜೀವಂತಿಕೆ ಅಂಶಗಳನ್ನು ಕಾರ್ನಾಡರು ತಮ್ಮ ವಿವಿಧ ನಾಟಕಗಳಲ್ಲಿ ಕಟ್ಟಿಕೊಟ್ಟಿರುವುದು ಅವರ ನಾಟಕಗಳ ವಿಶೇಷತೆ ಎಂದು ಹೇಳಬಹುದು. ಇಂತಹ ಕಂಬಾರರ ನಾಟಕಗಳಲ್ಲಿ ಮೂಡಿಬಂದಿರುವ ಸ್ತ್ರೀ ಪಾತ್ರಗಳ ಜೀವನ ವೈವಿಧ್ಯತೆಗಳನ್ನು ಈ ಅಧ್ಯಾಯದಲ್ಲಿ ವಿವರಿಸಲಾಗುವುದು.

ಗಿರೀಶ ಕಾರ್ನಾಡರ ನಾಗಮಂಡಲ ಹಾಗೂ ಹಯವದನ ನಾಟಕಗಳನ್ನು ಈ ಅಧ್ಯಾಯದ ವ್ಯಾಪ್ತಿಗೆ ಒಳಪಡಿಸಲಾಗುವುದು. ನಾಗಮಂಡಲ ನಾಟಕವು ಪಾಶ್ಚಿಮಾತ್ಯ ಸಾಹಿತ್ಯದ ಪ್ರೇರಣೆಯಿಂದ ರಚನೆಯಾಗಿದೆ. ಈ ನಾಟಕದಲ್ಲಿ ಮಹಿಳಾ ಪಾತ್ರವೇ ಪ್ರಧಾನವಾಗಿದೆ. ಪಾಶ್ಚಿಮಾತ್ಯ ಚಿಂತನೆಯ ಕ್ರಮದಲ್ಲಿ ಮೂಡಿಬರುವ ಮಹಿಳೆ ಮಹಿಳೆಯ ಪಾತ್ರವನ್ನು ಆಧಾರವಾಗಿಸಿಕೊಂಡು ಕಾರ್ನಾಡರು ರಾಣಿಯ ಪಾತ್ರವನ್ನು ಸೃಷ್ಟಿಸಿದ್ದಾರೆ. ರಾಣಿ ಪಾತ್ರ ಹುಟ್ಟಿಹಾಕುವ ಗಂಡ ಹೆಂಡತಿಯರ ವಾಸ್ತವಿಕ ಸಂಬಂಧದ ಪ್ರಶ್ನೆಗಳನ್ನು ಈ ಅಧ್ಯಾಯದಲ್ಲಿ ವಿವರಿಸಲಾಗುವುದು. ಜೊತೆಗೆ ರಾಣಿಯ ಮಾನಸಿಕ ಗೊಂದಲಗಳ ಕುರಿತು ಇಲ್ಲಿ ಚರ್ಚಿಸಲಾಗುವುದು. ಪುರುಷಕೇಂದ್ರಿತ ಸಾಂಪ್ರದಾಯಕ ಸಮಾಜದಲ್ಲಿ ಹೆಣ್ಣಿನ ಶೀಲದ ಕುರಿತು ತಳೆದಿರುವ ನಿಲುವುಗಳನ್ನು ವಿಮರ್ಶಾತ್ಮಕವಾಗಿ ವಿವರಿಸಲಾಗುವುದು. ಅದೇ ರೀತಿ ಹಯವದನ ನಾಟಕದಲ್ಲಿ ಕಾಣಿಸಿರುವ ಅಪೂರ್ಣತೆಯ ಪ್ರಜ್ಞೆಯ ಬಗ್ಗೆ ವಿಸ್ತಾರವಾಗಿ ಪರಾಮರ್ಶಿಸಲಾಗುವುದು. ಅಪೂರ್ಣತೆಯ ವಾಸ್ತವವನ್ನು ಎದುರಿಸಲಾಗದೆ ಸೋಲುವ ಪದ್ಮಿನಿಯ ಅಸ್ತಿತ್ವದ ಗೊಂದಲದ ಕುರಿತು ಇಲ್ಲಿ ವಿವರಿಸಲಾಗುವುದು. ಪದ್ಮಿನಿಯ ಪಾತ್ರ ಪಾಶ್ಚಿಮಾತ್ಯ ಜನಪದ ಚಿಂತನೆಯ ಪ್ರಭಾವಕ್ಕೆ ಒಳಗಾಗಿರುವ ಪರಿಯನ್ನು ಇಲ್ಲಿ ಗುರುತಿಸಲಾಗುವುದು. ಹಯವದನ ನಾಟಕದ ಪದ್ಮಿನಿಯ ಪಾತ್ರ ಭಾರತೀಯ ಜನಪದ ಹಿನ್ನೆಲೆಯಲ್ಲಿ ಹೆಚ್ಚಾಗಿ ಕಂಡುಬರುವುದಿಲ್ಲ. ಈ ಬಗೆಯ ಪಾತ್ರಗಳು ಪಾಶ್ಚಿಮಾತ್ಯ ಚಿಂತನೆಯ ಕೊಡುಗೆಗಳೆಂದು ಹೇಳಬಹುದು.

ಒಟ್ಟಾರೆಯಾಗಿ ಗಿರೀಶ ಕಾರ್ನಾಡರ ಈ ಮೇಲಿನ ಎರಡು ನಾಟಕಗಳ ಮೇಲೆ ಜನಪದ ಕಥೆಗಳು ಹಾಗೂ ಪಾಶ್ಚಿಮಾತ್ಯ ಚಿಂತನೆಗಳ ಪ್ರಭಾವವಿರುವ ಅಂಶವನ್ನು ಈ ಅಧ್ಯಾಯದಲ್ಲಿ ವಿವರಿಸಲಾಗುವುದು.

ಅಧ್ಯಾಯ- ೬

ಸಾಮಾಜಿಕ ನಾಟಕಗಳಲ್ಲಿ ಅಭಿವ್ಯಕ್ತಗೊಂಡಿರುವ ಮಹಿಳಾ ಸಂಕಥನ

ಸಾಮಾಜಿಕ ನಾಟಕಗಳಲ್ಲಿ ಅಭಿವ್ಯಕ್ತಗೊಂಡಿರುವ ಮಹಿಳಾ ಸಂಕಥನ ಎಂಬುದು ಈ ಸಂಶೋಧನಾ ಪ್ರಬಂಧದ ಆರನೆಯ ಅಧ್ಯಾಯವಾಗಿದೆ. ಚಂದ್ರಶೇಖರ ಕಂಬಾರರ ನಾಲ್ಕು ನಾಟಕಗಳನ್ನು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗುತ್ತದೆ. ಬೆಪ್ಪತಕ್ಕಡಿ, ಬೋಳೇಶಂಕರ ನಾಟಕದಲ್ಲಿ ಮೂಡಿಬಂದಿರುವ ಶ್ರಮ ಜೀವನದ ಸಾರ್ಥಕ ಅಂಶಗಳ ಕುರಿತು ಇಲ್ಲಿ ವಿವರಿಸಲಾಗುವುದು. ರಾಜಕುಮಾರಿಯೊಬ್ಬಳು ಸಾಮಾನ್ಯ ರೈತನನ್ನು ಮೆಚ್ಚಿ ವಿವಾಹವಾಗುವ ಸನ್ನಿವೇಶವನ್ನು ಇಲ್ಲಿ ವಿಶ್ಲೇಷಿಸಲಾಗುವುದು. ಅದೇ ರೀತಿ ಹರಕೆಯ ಕುರಿ ನಾಟಕದಲ್ಲಿ ಕಂಡುಬರುವ ಮಧ್ಯಮ ವರ್ಗದ ಮಹಿಳೆಯರ ಜೀವನದ ತುಡಿತಗಳನ್ನು ಅನಾವರಣಗೊಳಿಸಿರುವ ಪರಿಯನ್ನು ವಿಮರ್ಶಿಸಲಾಗುವುದು. ಅದೇ ರೀತಿ ಕಾಡು ಕುದುರೆ ನಾಟಕದಲ್ಲಿ ಕೋಮಾಲಿ, ಚಂಪಿ, ದುರ್ಗಿ ಹಾಗೂ ಮುಂತಾದ ಹೆಣ್ಣು ಮಕ್ಕಳನ್ನು ವಿವಿಧ ಲೈಂಗಿಕ ಪ್ರತಿಮೆಗಳಾಗಿ ಚಿತ್ರಿಸುವ ಪರಿಯನ್ನು ವೈಜ್ಞಾನಿಕ ಸ್ತ್ರೀವಾದ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗುವುದು. ಒಟ್ಟಾರೆಯಾಗಿ ಕಂಬಾರರ ಸಾಮಾಜಿಕ ನಾಟಕಗಳಲ್ಲಿ ಮೂಡಿಬಂದಿರುವ ಮಹಿಳೆಯರು ಸಮಾಜದ ವಿವಿಧ ಪಂಗಡ ಹಾಗೂ ಸಮುದಾಯಗಳ ಪ್ರತಿನಿಧಿಗಳಾಗಿ ಬಿಂಬಿತರಾಗಿದ್ದಾರೆ. ಮಹಿಳೆಯರ ಸಾಮಾಜಿಕ ಜೀವನದ ವಿವಿಧ ಸ್ಥಿತಿಗತಿಗಳನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗುವುದು. ಸಮಾಜದಲ್ಲಿ ಮಹಿಳೆಯರಿಗೆ ಎದುರಾಗುವ ವಿವಿಧ ಬಗೆಯ ಸಮಸ್ಯೆಗಳ ಕುರಿತು ಇಲ್ಲಿ ಚರ್ಚಿಸಲಾಗುವುದು. ಸಾಮಾಜಿಕ ಕಟ್ಟುಪಾಡುಗಳಿಂದ ಮಹಿಳೆಯರು ಹೊರಬರಬೇಕಾದ ಅನಿವಾರ್ಯತೆಯ ಕುರಿತು ಈ ಅಧ್ಯಾಯದಲ್ಲಿ ಜಾಗೃತಿ ಮೂಡಿಸುವ ಪ್ರಯತ್ನವನ್ನು ಮಾಡಲಾಗುವುದು.

ಗಿರೀಶ ಕಾರ್ನಾಡರ ಅಂಜು-ಮಲ್ಲಿಗೆ ನಾಟಕದಲ್ಲಿ ಮೂಡಿಬಂದಿರುವ ಮಹಿಳಾ ಪಾತ್ರಗಳ ಕುರಿತು ಈ ಅಧ್ಯಾಯದಲ್ಲಿ ವಿವರಿಸಲಾಗುವುದು. ಈ ನಾಟಕದ ಕೇಂದ್ರ ಪಾತ್ರ ಯಾಮಿನಿ ಹುಟ್ಟಿಹಾಕುವ ಗಂಡು ಹೆಣ್ಣಿನ ವೈವಾಹಿಕ ಸಂಬಂಧದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನವನ್ನು ಇಲ್ಲಿ ಮಾಡಲಾಗುವುದು. ಪ್ರೀತಿ ಹಾಗೂ ಕಾಮಗಳ ನಡುವಿನ ಘರ್ಷಣೆಯಲ್ಲಿ ಕಳೆದುಹೋಗುವ ಯಾಮಿನಿಯ ಮಾನಸಿಕ ನೆಮ್ಮದಿಯ ಕುರಿತು ಇಲ್ಲಿ ಚರ್ಚಿಸಲಾಗುವುದು. ಅದೇ ರೀತಿ ಬೆಂದ ಕಾಳು ಅನ್ ಟೋಸ್ಟ್ ನಾಟಕದಲ್ಲಿ ಮೂಡಿ ಬಂದಿರುವ ನಗರ ಪ್ರದೇಶಗಳಲ್ಲಿ ವಾಸಿಸುವ ಗೃಹಿಣಿಯರ ಬದುಕಿನ ವಿವಿಧ ಮಜಲುಗಳನ್ನು ಇಲ್ಲಿ ವಿವರಿಸಲಾಗುವುದು. ಒಟ್ಟಾರೆಯಾಗಿ ಈ ಅಧ್ಯಾಯದಲ್ಲಿ ಮಹಿಳೆಯರ ಸಾಮಾಜಿಕ ಸ್ಥಾನಮಾನ ಹಾಗೂ ಸಮಸ್ಯೆಗಳ ಕುರಿತು ಕಾರ್ನಾಡರ ನಾಟಕಗಳಲ್ಲಿ ಕಂಡುಬರುವ ವಿವಿಧ ಅಂಶಗಳನ್ನು ಗ್ರಹಿಸಿ ವಿಮರ್ಶಿಸಲಾಗುವುದು. ಕಾರ್ನಾಡರ ಸಾಮಾಜಿಕ ನಾಟಕಗಳಲ್ಲಿ ಮಹಿಳೆಯರ ಸಮಸ್ಯೆಗಳಿಗೆ ಉತ್ತರ ಹುಡುಕುವ ಪ್ರಯತ್ನವನ್ನು ಮಾಡಲಾಗಿರುವ ಪರಿಯನ್ನು ಗುರುತಿಸಲಾಗುವುದು. ಕಾರ್ನಾಡರು ರಚಿಸಿರುವ ವಿವಿಧ ಸಾಮಾಜಿಕ ನಾಟಕಗಳಲ್ಲಿ ಮಹಿಳೆಯರಿಗೆ ನೀಡಿರುವ ಸ್ಥಾನಮಾನವನ್ನು ಕುರಿತು ಈ ಅಧ್ಯಾಯದಲ್ಲಿ ವಿವರಿಸಲಾಗುವುದು.

ಅಧ್ಯಾಯ- ೭

ಏಕಾಂಕ ಮತ್ತು ಅಸಂಗತ ನಾಟಕಗಳಲ್ಲಿ ಅಭಿವ್ಯಕ್ತಗೊಂಡಿರುವ ಮಹಿಳಾ ಸಂಕಥನ

ಏಕಾಂಕ ಮತ್ತು ಅಸಂಗತ ನಾಟಕಗಳಲ್ಲಿ ಅಭಿವ್ಯಕ್ತಗೊಂಡಿರುವ ಮಹಿಳಾ ಸಂಕಥನ ಎಂಬುವುದು ಈ ಸಂಶೋಧನಾ ಪ್ರಬಂಧದ ಏಳನೆಯ ಅಧ್ಯಾಯವಾಗಿದೆ. ಚಂದ್ರಶೇಖರ ಕಂಬಾರರ ಆರು ನಾಟಕಗಳನ್ನು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗುತ್ತದೆ. ಕಂಬಾರರ ನಾಟಕದಲ್ಲಿ ವ್ಯಕ್ತವಾಗಿರುವ ನಗರಜೀವನದ ವಾಸ್ತವಿಕ ಸ್ಥಿತಿಗತಿಗಳನ್ನು ಇಲ್ಲಿ ವಿವರಿಸಲಾಗುವುದು. ಅಂಗಿಮ್ಯಾಲಂಗಿ ನಾಟಕದಲ್ಲಿ ವ್ಯಕ್ತವಾಗಿರುವ ಶಾಂತ ಮತ್ತು ಕಾಶಮ್ಮ ರ ಬದುಕಿನ ಅಸ್ತಿತ್ವದ ನೆಲೆಗಳನ್ನು ಕಂಬಾರರು ಯಾವ ಪ್ರಮಾಣದಲ್ಲಿ ತಮ್ಮ ನಾಟಕದಲ್ಲಿ ಅಭಿವ್ಯಕ್ತಿಸಿದ್ದಾರೆ ಎಂಬ ಅಂಶವನ್ನು ಚರ್ಚಿಸಲಾಗುವುದು. ಅದೇ ರೀತಿ ಬೆಂಬತ್ತಿನ ಕಣ್ಣು ನಾಟಕದ ಕಥಾನಾಯಕಿ ಉಷಾಳ ಅನೈತಿಕ ಸಂಬಂಧ ಆಕೆಯ ಸಾಮಾಜಿಕ ಬದುಕಿನ ಮೇಲೆ ಬೀರುವ ಪರಿಣಾಮಗಳ ಕುರಿತು ಇಲ್ಲಿ ವಿಶ್ಲೇಷಿಸಲಾಗುವುದು. ಹಾಗೆಯೇ ಭಾರತಾಂಬೆ ನಾಟಕದಲ್ಲಿ 'ರಾಮಕ್ಕ' ಮತ್ತು 'ಬಂಗಾರಿ' ಪಾತ್ರಗಳ ಮೂಲಕ ಅಭಿವ್ಯಕ್ತವಾಗಿರುವ ಗ್ರಾಮೀಣ ಹಾಗೂ ದಲಿತ ಹೆಣ್ಣು ಮಕ್ಕಳ ಸಂವೇದನೆಯ ವಿವಿಧ ನೆಲೆಗಳನ್ನು ಇಲ್ಲಿ ವಿವರಿಸಲಾಗುವುದು. ವ್ಯಕ್ತವಾಗಿರುವ ಬಡವರ್ಗದ ಜನರ ಸಮಸ್ಯೆಗಳ ಕುರಿತು ವಿಸ್ತೃತವಾಗಿ ಚರ್ಚಿಸಲಾಗುವುದು. ಈ ನಾಟಕಗಳ ಜೊತೆಗೆ ಕಂಬಾರರ ಖರೋಖರ ಅಪರಿಚಿತರು ಅಳವಂಡೆಗಳು ಹಾಗೂ ಇತರ ನಾಟಕಗಳಲ್ಲಿ ಮೂಡಿಬಂದಿರುವ ಮಹಿಳಾ ಜೀವನದ ವಿವಿಧ ಮಜಲುಗಳನ್ನು ವಿವರಿಸಲಾಗುವುದು. ಕಂಬಾರರ ಹೆಚ್ಚಿನ ಏಕಾಂಕ ಹಾಗೂ ಅಸಂಗತ ನಾಟಕಗಳಲ್ಲಿ ಮೂಡಿಬಂದಿರುವ ಮಹಿಳಾ ಪಾತ್ರ ಪರಿಕಲ್ಪನೆ ಕುಳಿತು ಹೇಳುವುದಾದರೇ ಇಲ್ಲಿನ ಮಹಿಳೆಯರು ಹೆಚ್ಚಾಗಿ ಏಕಾಂಗಿತನ ಹಾಗೂ ದಬ್ಬಾಳಿಕೆಯನ್ನು ಅನುಭವಿಸುವ ಅಂಶ ಕಂಡುಬರುತ್ತದೆ ಎನ್ನಬಹುದು. ಒಟ್ಟಾರೆಯಾಗಿ ಕಂಬಾರರ ಏಕಾಂಕ ಹಾಗೂ ಅಸಂಗತ ನಾಟಕಗಳಲ್ಲಿ ಮೂಡಿಬಂದಿರುವ ಸ್ತ್ರೀ ಪಾತ್ರ ಪೋಷಣೆಯನ್ನು ಈ ಅಧ್ಯಾಯದಲ್ಲಿ ಸಮಗ್ರವಾಗಿ ವಿಮರ್ಶಾತ್ಮಕ ನೆಲೆಗಟ್ಟಿನಲ್ಲಿ ವಿವರಿಸಲಾಗುವುದು

ಗಿರೀಶ ಕಾರ್ನಾಡರ ಮಾನಿಷಾದ ಹಾಗೂ ಒಡಕಲು ಬಿಂಬ ನಾಟಕಗಳನ್ನು ಈ ಅಧ್ಯಾಯದ ವ್ಯಾಪ್ತಿಗೆ ಒಳಪಡಿಸಲಾಗುವುದು. ಮಾನಿಷಾದ ನಾಟಕದಲ್ಲಿ ಚಿತ್ರಣಗೊಂಡಿರುವ ಅಗಸನ 'ಹೆಂಡತಿ'ಯ ಮಾನಸಿಕ ತೊಳಲಾಟಗಳ ಹಾಗೂ ಅಸಹಾಯಕ ಸನ್ನಿವೇಶವನ್ನು ಇಲ್ಲಿ ವಿಮರ್ಷಿಸಲಾಗುವುದು. ಹಾಗೂ ನಾಟಕದಲ್ಲಿ ಅ ಪ್ರಕಟಿತವಾಗಿ ಕಾಣಿಸಿಕೊಳ್ಳುವ 'ಸೀತೆ'ಯ ಅಸ್ತಿತ್ವದ ಶೋಧದ ಭಿನ್ನ ನೆಲೆಗಳನ್ನು ಇಲ್ಲಿ ಚರ್ಚಿಸಲಾಗುವುದು. ಈ ನಾಟಕ ರಾಮಾಯಣದ ಸನ್ನಿವೇಶದ ಮೇಲೆ ರಚನೆಯಾಗಿದೆಯಾದರೂ ಇದನ್ನು ಏಕಾಂಕ ನಾಟಕಗಳ ವ್ಯಾಪ್ತಿಗೆ ಸೇರಿಸಲಾಗಿದೆ. ಕಾರಣ ಖುದ್ದು ಕಾರ್ನಾಡರೇ ಈ ನಾಟಕವನ್ನು ಏಕಾಂಕ ನಾಟಕವೆಂದು ಹೇಳಿಕೊಂಡಿರುವುದರಿಂದ ಮಾನಿಷಾದ ನಾಟಕವನ್ನು ಪೌರಾಣಿಕ ನಾಟಕದ ವ್ಯಾಪ್ತಿಗೆ ಸೇರಿಸದೇ ಏಕಾಂಕ ನಾಟಕಗಳ ವ್ಯಾಪ್ತಿಗೆ ಪರಿಗಣಿಸುವಂತೆ ಮಾಡಿದೆ. ಅದೇ ರೀತಿ ಒಡಕಲು ಬಿಂಬ ನಾಟಕದಲ್ಲಿ ಮೂಡಿಬಂದಿರುವ ಮಹಿಳಾ ಬದುಕಿನ ಅನಾಥ ಪ್ರಜ್ಞೆಯ ಹತಾಶೆಯನ್ನು ವಿವರಿಸಲಾಗುವುದು. ಹಾಗೂ ಮಂಜುಳಾಳ ಏಕಾಂಗಿ ಬದುಕಿನ ಭಾವನಾತ್ಮಕ ತಲ್ಲಣಗಳನ್ನು ಈ ಅಧ್ಯಾಯದಲ್ಲಿ ಪರಾಮರ್ಶಿಸಲಾಗುವುದು. ಮಹಿಳೆಯರ ಅಸ್ತಿತ್ವಶೋಧ ಹಾಗೂ ಏಕಾಂಗಿ ಜೀವನದ ತಲ್ಲಣಗಳನ್ನು ಈ

ಮೇಲಿನ ನಾಟಕಗಳ ಹಿನ್ನೆಲೆಯಲ್ಲಿ ವಿಸ್ತೃತವಾಗಿ ವಿಮರ್ಶಿಸಲಾಗುವುದು. ಕಾರ್ನಾಡರ ಏಕಾಂಕ ಹಾಗೂ ಅಸಂಗತ ನಾಟಕಗಳ ಕುರಿತು ಹೇಳುವುದಾದರೇ ಅವರ ಎಲ್ಲ ನಾಟಕಗಳಲ್ಲಿ ಕಂಡುಬರುವ ಮಹಿಳಾ ಪಾತ್ರಗಳು ಸೂಕ್ಷ್ಮ ಸಂವೇದನೆಗಳನ್ನು ಒಳಗೊಂಡಿರುತ್ತವೆ ಎಂದು ಹೇಳಬಹುದು. ಅವರು ತಮ್ಮ ಈ ನಾಟಕಗಳಲ್ಲಿ ಮಹಿಳಾ ಪಾತ್ರಗಳಿಗೆ ಹೆಚ್ಚಿನ ಸ್ಥಾನವನ್ನು ನೀಡಿದ್ದಾರೆ. ಜೊತೆಗೆ ಅವರ ಜೀವನದಲ್ಲಿ ಉಂಟಾಗುವ ಹತಾಶೆ ಹಾಗೂ ಏಕಾಂಗಿ ಪ್ರಜ್ಞೆಯನ್ನು ಓದುಗರ ಮುಂದೆ ಬಿಚ್ಚಿಡುವ ಪ್ರಯತ್ನವನ್ನು ಮಾಡಿದ್ದಾರೆ ಎಂದು ಹೇಳಬಹುದು, ಇಂತಹ ಅನೇಕ ಸೂಕ್ಷ್ಮ ಅಂಶಗಳನ್ನು ಈ ಅಧ್ಯಾಯದಲ್ಲಿ ವಿಸ್ತೃತವಾಗಿ ವಿವರಿಸಲಾಗುವುದು,

ಅಧ್ಯಾಯ- ೮

ಚಂದ್ರಶೇಖರ ಕಂಬಾರ ಹಾಗೂ ಗಿರೀಶ ಕಾರ್ನಾಡರ ಇತರ ನಾಟಕಗಳಲ್ಲಿ ಅಭಿವ್ಯಕ್ತಗೊಂಡಿರುವ ಮಹಿಳಾ ಸಂಕಥನ

ಈ ಅಧ್ಯಾಯದಲ್ಲಿ ಕಂಬಾರ ಹಾಗೂ ಕಾರ್ನಾಡರ ಉಳಿದ ಇತರ ನಾಟಕಗಳಲ್ಲಿ ಅಭಿವ್ಯಕ್ತಗೊಂಡಿರುವ ಮಹಿಳಾ ಪಾತ್ರ ಪೋಷಣೆಯ ಕುರಿತು ವಿವರಿಸಲಾಗುವುದು. ಈ ಅಧ್ಯಾಯದ ವ್ಯಾಪ್ತಿಗೆ ಒಳಪಡುವ ನಾಟಕಗಳು ಮೇಲಿನ ಯಾವುದೇ ಅಧ್ಯಾಯಗಳ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ. ಪ್ರತ್ಯೇಕವಾಗಿ ಉಳಿದ ನಾಟಕಗಳ ಅಧ್ಯಯನಕ್ಕಾಗಿ ಈ ಅಧ್ಯಾಯವನ್ನು ಮಾಡಿಕೊಳ್ಳಲಾಗಿದೆ. ಚಂದ್ರಶೇಖರ ಕಂಬಾರರ ಜೈಸಿದ್ಧನಾಯಕ, ಕಿಟ್ಟಿ ಕತೆ, ಪುಷ್ಪರಾಣಿ, ಸಾಂಬಶಿವ ಪ್ರವಹನ ಹಾಗೂ ಮುಂತಾದ ನಾಟಕಗಳನ್ನು ಇತರ ನಾಟಕಗಳ ವ್ಯಾಪ್ತಿಗೆ ಸೇರಿಸಲಾಗಿದೆ. ಈ ನಾಟಕಗಳಲ್ಲಿ ಅಭಿವ್ಯಕ್ತಗೊಂಡಿರುವ ಮಹಿಳಾ ಜೀವನ ಹಾಗೂ ವಿವಿಧ ಸಂವೇದನೆಗಳನ್ನು ಇಲ್ಲಿ ವಿವರಿಸಲಾಗುವುದು. ಅದೇ ರೀತಿ ಗಿರೀಶ ಕಾರ್ನಾಡರ ಇತರ ನಾಟಕಗಳಲ್ಲಿ ಅಭಿವ್ಯಕ್ತಗೊಂಡಿರುವ ಮಹಿಳಾ ಜೀವನ ಹಾಗೂ ಸಂವೇದನೆಗಳನ್ನು ವಿಮರ್ಶಾತ್ಮಕವಾಗಿ ಈ ಅಧ್ಯಾಯದಲ್ಲಿ ವಿವರಿಸಲಾಗುವುದು. ಈ ಅಧ್ಯಾಯದಲ್ಲಿ ಗಿರೀಶ ಕಾರ್ನಾಡರ ಹೆಚ್ಚಿನ ನಾಟಕಗಳು ಕಂಡುಬರುವುದಿಲ್ಲ ಕಾರಣ ಅವರ ಎಲ್ಲ ನಾಟಕಗಳು ಮೇಲಿನ ಬೇರೆ ಬೇರೆ ಅಧ್ಯಾಯಗಳ ವ್ಯಾಪ್ತಿಗೆ ಒಳಪಟ್ಟಿವೆ.

ಈ ಮೇಲೆ ಮಾಡಿಕೊಂಡಿರುವ ಪ್ರತಿ ಅಧ್ಯಾಯಗಳ ಕೊನೆಗೆ ಕಂಬಾರ ಹಾಗೂ ಕಾರ್ನಾಡರ ನಾಟಕಗಳಲ್ಲಿ ಕಂಡುಬರುವ ಸಾಮ್ಯತೆ ಹಾಗೂ ಭಿನ್ನತೆಯ ಅಂಶಗಳನ್ನು ತೌಲನಿಕವಾಗಿ ವಿಮರ್ಶೆಗೆ ಒಳಪಡಿಸಲಾಗುತ್ತದೆ. ಈ ಇಬ್ಬರು ನಾಟಕಕಾರರ ನಾಟಕಗಳಲ್ಲಿ ಕಂಡುಬರುವ ವಿವಿಧ ಮಹಿಳಾ ಸಂವೇದನೆ ಹಾಗೂ ಮಹಿಳೆಯರ ಜೀವನ ಕ್ರಮವನ್ನು ತೌಲನಿಕ ಹಿನ್ನೆಲೆಯಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗುತ್ತದೆ. ಜೊತೆಗೆ ಈ ಇಬ್ಬರು ನಾಟಕಕಾರರು ತಮ್ಮ ನಾಟಕಗಳಲ್ಲಿ ಮಹಿಳಾ ಪಾತ್ರಗಳ ಬಗ್ಗೆ ತಿಳಿದಿರುವ ನಿಲುವುಗಳನ್ನು ಕುರಿತು ಕೆಲವು ಮಾತುಗಳನ್ನು ವಿಮರ್ಶಾತ್ಮಕವಾಗಿ ಆಡಲಾಗುತ್ತದೆ.

ಅಧ್ಯಾಯ- ೯

ಸಮಾರೋಪ

ಈ ಸಂಶೋಧನಾ ಪ್ರಬಂಧದ ಒಂಬತ್ತನೆಯ ಅಧ್ಯಾಯದಲ್ಲಿ ಸಂಶೋಧನಾ ಪ್ರಬಂಧದ ಸಮರೋಪವನ್ನು ಮಾಡಲಾಗುತ್ತದೆ. ಒಟ್ಟಾರೆಯಾಗಿ ಈ ಸಂಶೋಧನೆಯಲ್ಲಿ ದೊರೆತ ಫಲಿತಗಳನ್ನು ಇಲ್ಲಿ ವಿವರಿಸಲಾಗುವುದು. ಅದರ ಜೊತೆಗೆ ಮುಂದಿನ ಅಧ್ಯಯನದ ಸಾಧ್ಯತೆಗಳ ಕುರಿತು ಸಂಕ್ಷಿಪ್ತವಾಗಿ ಚರ್ಚಿಸಲಾಗುವುದು. ಚಂದ್ರಶೇಖರ ಕಂಬಾರ ಹಾಗೂ ಗಿರೀಶ ಕಾರ್ನಾಡರ ನಾಟಕಗಳಲ್ಲಿ ಮಹಿಳಾ ಸಂಕಥನ ಎಂಬ ಅಧ್ಯಯನದ ಮೂಲಕ ದೊರೆತ ಫಲಿತಾಂಶಗಳ ಬಗ್ಗೆ ಇಲ್ಲಿ ವಿಶ್ಲೇಷಿಸಲಾಗುವುದು.

ಸಂಶೋಧನಾ ಪ್ರಬಂಧದ ಕೊನೆಯ ಭಾಗದಲ್ಲಿ ಚಂದ್ರಶೇಖರ ಕಂಬಾರರ ಸಂದರ್ಶನದ ವಿವರಗಳನ್ನು ನೀಡಲಾಗುವುದು.

ಅನುಬಂಧಗಳು

ಆಕರ ಗ್ರಂಥಗಳು

1. ಸಿರಿಸಂಪಿಗೆ - ಚಂದ್ರಶೇಖರ್ ಕಂಬಾರ,
2. ಚಾಳೇಶ - ಚಂದ್ರಶೇಖರ ಕಂಬಾರ,
3. ಜಕ್ಕಣ್ಣ - ಚಂದ್ರಶೇಖರ್ ಕಂಬಾರ,
4. ಶಿವರಾತ್ರಿ - ಚಂದ್ರಶೇಖರ ಕಂಬಾರ,
5. ಹರಿಕೆಯ ಕುರಿ - ಚಂದ್ರಶೇಖರ ಕಂಬಾರ,
6. ಕಾಡು ಕುದುರೆ - ಚಂದ್ರಶೇಖರ ಕಂಬಾರ,
7. ಭಾರತಾಂಬೆ - ಚಂದ್ರಶೇಖರ ಕಂಬಾರ
8. ಬೆಂಬತ್ತಿದ ಕಣ್ಣು - ಚಂದ್ರಶೇಖರ ಕಂಬಾರ,
9. ಜೋಕುಮಾರಸ್ವಾಮಿ - ಚಂದ್ರಶೇಖರ ಕಂಬಾರ,
10. ಅಂಗಿಮ್ಯಾಲಂಗಿ - ಚಂದ್ರಶೇಖರ ಕಂಬಾರ
11. ಯಯಾತಿ - ಗಿರೀಶ ಕಾರ್ನಾಡ,
12. ನಾಗಮಂಡಲ - ಗಿರೀಶ ಕಾರ್ನಾಡ,
13. ಅಗ್ನಿ ಮತ್ತು ಮಳೆ - ಗಿರೀಶ ಕಾರ್ನಾಡ,
14. ಬಲಿ - ಗಿರೀಶ ಕಾರ್ನಾಡ,
15. ಅಂಜು ಮಲ್ಲಿಗೆ - ಗಿರೀಶ ಕಾರ್ನಾಡ,
16. ಮಾನಿಷಾದ - ಗಿರೀಶ ಕಾರ್ನಾಡ,
17. ತಲೆದಂಡ - ಗಿರೀಶ ಕಾರ್ನಾಡ,
18. ಬೆಂದ ಕಾಳು ಆನ್ ಫೋಸ್ಟ್ - ಗಿರೀಶ ಕಾರ್ನಾಡ,
19. ಒಡಕಲು ಬಿಂಬ - ಗಿರೀಶ ಕಾರ್ನಾಡ,
20. ತುಘಲಕ್ - ಗಿರೀಶ ಕಾರ್ನಾಡ,

ಚಂದ್ರಶೇಖರ ಕಂಬಾರ ಮತ್ತು ಗಿರೀಶ ಕಾರ್ನಾಡ ರ ಇತರ ನಾಟಕಗಳು

ಪರಾಮರ್ಶನ ಗ್ರಂಥಗಳು

1. ಆಧುನಿಕ ಕನ್ನಡ ನಾಟಕ - ಕೆ ಮರಳುಸಿದ್ದಪ್ಪ,
2. ಕನ್ನಡ ರಂಗಭೂಮಿ - ಕಾವ್ಯಂ ಶ್ರೀನಿವಾಸ ಮೂರ್ತಿ,
3. ಗಿರೀಶ ಕಾರ್ನಾಡ - ಮೀರಾಮೂರ್ತಿ
4. ಕನ್ನಡ ನಾಟಕಗಳಲ್ಲಿ ಸ್ತ್ರೀ ಲೋಕ - ಹೇಮಾ ಪಟ್ಟಣಶೆಟ್ಟಿ,
5. ಗಿರೀಶ ಕಾರ್ನಾಡರ ನಾಟಕಗಳಲ್ಲಿ ಸ್ತ್ರೀ - ಮಮತಾ ರಾವ್,

6. ಬಹುರೂಪಿ ಗಿರೀಶ್ ಕಾರ್ನಾಡ - ಜೋಗಿ,
7. ಗಿರೀಶ ಕಾರ್ನಾಡರ ನಾಟಕಗಳ ವಿಮರ್ಶೆ - ಕೃಷ್ಣಮೂರ್ತಿ ಚಂದರ್,
8. ಸಮಾರಾಧನ - ಜಿ ಎಸ್ ಅಮೂರ,
9. ರಂಗ ಪ್ರತಿಸ್ಪಂದನ - ಜಯಪ್ರಕಾಶ ಮಾವಿನ ಕುಳಿ,
10. ರಂಗ ಪ್ರಪಂಚ - ಕೆ ವಿ ಅಕ್ಷರ,
11. ಗಿರೀಶ ಕರುನಾಡ ಮತ್ತು ಅವರ ಮೂರು ಚಾರಿತ್ರಿಕ ನಾಟಕಗಳು - ಸಿ ಎನ್ ರಾಮಚಂದ್ರನ್
12. ಚಂದ್ರಶೇಖರ ಕಂಬಾರ ಅವರ ನಾಟಕಗಳು - ಎಂ ಪಾನಗುಡೆ,
13. ಕನ್ನಡ ಸಾಹಿತ್ಯ ಪರಂಪರೆ ಮತ್ತು ಕಂಬಾರರು - ವೀರೇಶ ಬಡಿಗೇರ,
14. ಚಂದ್ರಶೇಖರ ಕಂಬಾರ - ಬಸವರಾಜ ಮಲಶೆಟ್ಟಿ,
15. ಕಂಬಾರರ ಚಕೋರಿ - ಕೆ ಸಿ ಶಿವಾರೆಡ್ಡಿ,
16. ನೂರು ಮರ ನೂರು ಸ್ವರ - ಕೀರ್ತಿನಾಥ ಕುರ್ತಕೋಟಿ,
17. ಗಿರೀಶ ಕಾರ್ನಾಡರ ನಾಟಕ ಪ್ರಪಂಚ - ಮಾಧವ ಕುಲಕರಣಿ,
18. ಬೆಳಕಿನ ಬೆರಗು - ಎಸ್ ಶ್ರೀಧರಮೂರ್ತಿ,
19. ಗಿರೀಶ ಕಾರ್ನಾಡ ಹಾಗೂ ಭಾರತೀಯರ ರಂಗಭೂಮಿ - ಜಿ ಎಸ್ ಆಮೂರ,
20. ಕಾಲು ದಾರಿ - ಲಕ್ಷ್ಮಿಪತಿ ಕೋಲಾರ,

ಸಾಮಾಜಿಕ ಜಾಲತಾಣಗಳು

- https://www.studocu.com/in/document/bangalore-university/bachelor-of-arts/sirisampige-the-drama/24895837
- https://www.englishliterature.info/2022/06/character-analysis-in-play-tughlaq.html?m=1#:~:text=He%20is%20a%20great%20opportunist,communal%20harmony%20in%20his%20kingdom
- https://en.m.wikipedia.org/wiki/Hayavadana
- https://anivaasi.com/2022/05/20/%E0%B2%97%E0%B2%BF%E0%B2%B0%E0%B3%80%E0%B2%B6%E0%B3%8D-%E0%B2%95%E0%B2%BE%E0%B2%B0%E0%B3%8D%E0%B2%A8%E0%B2%BE%E0%B2%A1%E0%B2%B0-%E0%B2%9C%E0%B2%A8%E0%B3%8D%E0%B2%AE-%E0%B2%A6%E0%B2%BF%E0%B2%A8/
- https://cinibuzz.in/nagamandala/
- https://cinibuzz.in/girish-karnad-8/
- https://www.bookbrahma.com/book/dr-chandrashekhara-kambara-avara-natakagalu
- http://kannadakavi.com/kavikoota/3jnanapeeta/girish_karnad.ht

- https://kannada.news18.com/news/state/girish-karnad-passed-away-at-the-age-of-81-girish-karnad-images-girish-karnad-obituary-mak-197083.html